# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 226 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.03.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 226 • PRGI No:KARKAN/2023/88055 • VIJAYANAGARA • 13.03.2025 • Thursday • Page:04 • Rs:2

Good Opportunity for Branding
1,20,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




# ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಲಹೆ | ಪರೀಕ್ಷೆ ನಡೆಸಲು ಜಿಲ್ಲಾಡಳಿತ ಸನ್ನದ್ಧ. | ಮಾ.21 – ಏ.4ರವರೆಗೆ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ

### ಜಿಲ್ಲಾದ್ಯಂತ 71 ಪರೀಕ್ಷಾ ಕೇಂದ್ರ | ಒಟ್ಟು 22700 ವಿದ್ಯಾರ್ಥಿಗಳು | 21,429 ಹೊಸಬರು , ಪುನರಾವರ್ತಿತ–ಖಾಸಗಿ 1271 ವಿದ್ಯಾರ್ಥಿಗಳು





**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಶಿಸ್ತುಬದ್ಧ, ಪಾರದರ್ಶಕ ಪರೀಕ್ಷೆಗಳನ್ನು ನಡೆಸಲು ಹಾಗೂ ಪರೀಕ್ಷಾ ಮಾರ್ಗಸೂಚಿಗಳನ್ವಯ ಅಚ್ಚುಕಟ್ಟಾಗಿ ಪರೀಕ್ಷೆ ನಡೆಸಲು ಜಿಲ್ಲಾಡಳಿತ ಸನ್ನದ್ಧವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆಯಿಂದ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿದರು. ಮಾ.21 ರಿಂದ ಏ.4 ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳಲ್ಲಿ ಯಾವುದೇ ಪರೀಕ್ಷಾ ಅಕ್ರಮ ಚಟುವಟಿಕೆಗಳು ನಡೆಯದಂತೆ ಪೊಲೀಸ್ ಬಿಗಿಬಂದೋಬಸ್ತ್ ಕಲ್ಪಿಸಿ ಪರೀಕ್ಷಾ ನಿಯಮಗಳನ್ನು ಪಾಲಿಸುವ ಮೂಲಕ ಶಿಸ್ತುಬದ್ಧವಾಗಿ ಪರೀಕ್ಷೆ ನಡೆಸಲು ಸೂಚಿಸಿದರು. ಒಟ್ಟು ಜಿಲ್ಲೆಯಲ್ಲಿ 71 ಪರೀಕ್ಷಾ ಕೇಂದ್ರಗಳಿವೆ. ಪರೀಕ್ಷಾ ಮುಖ್ಯ ಅಧೀಕ್ಷಕರು ಮಾರ್ಗಸೂಚಿಗಳನ್ನು ಅರ್ಥೈಸಿಕೊಂಡು ಅದರಂತೆ ಕರ್ತವ್ಯ ನಿರ್ವಹಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ರಕ್ಷಣಾತ್ಮಕ ಕಾಪೌಂಡು ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ನೀಡಬೇಕು.

- ಸೂಕ್ತ ಆಸವನದ ವ್ಯವಸ್ಥೆ
- ಅಗತ್ಯದಷ್ಟು ಕುಡಿಯುವ ನೀರು
- ಶೌಚಾಲಯ ವ್ಯವಸ್ಥೆ
- ವಿಕಲ ಚೇತನರಿಗೆ ನೆಲಮಹಡಿಯಲ್ಲಿ
- ಅಂಧ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿ
- ಕೇಂದ್ರದೊಳಗೆ ಮೊಬೈಲ್, ಕ್ಯಾಲ್ಕುಲೇಟರ್
- ಎಲೆಕ್ಟ್ರಾನಿಕ್ ಉಪಕರಣ ನಿಷೇಧ,
- ಮೇಲ್ವಿಚಾರಕರಿಗೂ ಮೊಬೈಲ್ ಬಳಕೆ ನಿಷೇಧ
- ಅಗತ್ಯ ಬಸ್ ವ್ಯವಸ್ಥೆ ಕಲ್ಪಿಸಿ

ಪರೀಕ್ಷಾ ಕೇಂದ್ರದಲ್ಲಿನ ಸಿಸಿ ಕ್ಯಾಮೆರಾಗಳು, ವೆಬ್ ಕಾಸ್ಟಿಂಗ್‌ಗೆ ಪೂರಕ ಇಂಟರ್‌ನೆಟ್ ವ್ಯವಸ್ಥೆಯನ್ನು ಪರಿಶೀಲಿಸಬೇಕು. ಪರೀಕ್ಷಾ ಕೇಂದ್ರದೊಳಗೆ ಯಾವುದೇ ಬಗೆಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಮತ್ತು ಪರೀಕ್ಷಾ ಅವಧಿಯಲ್ಲಿ ಕೊಠಡಿ ಮೇಲ್ವಿಚಾರಕರು ಮೊಬೈಲ್ ಬಳಕೆ ಮಾಡುವುದನ್ನು ಸಹ ನಿಷೇಧಿಸಲಾಗಿದೆ ಎಂದರು.

ಪರೀಕ್ಷಾ ದಿನದಂತೆ ನಿಗಧಿತ ಅವಧಿಯೊಳಗೆ ಪರೀಕ್ಷಾ ಕೇಂದ್ರಗಳಿಗೆ ಖಜಾನೆ ಇಲಾಖೆಯಲ್ಲಿನ ಪ್ರಶ್ನೆ ಪತ್ರಿಕೆಗಳನ್ನು ಸೂಕ್ತ ಪೊಲೀಸ್ ರಕ್ಷಣೆಯೊಂದಿಗೆ ಆಯಾ ಕೇಂದ್ರಗಳಿಗೆ ತಲುಪಿಸಲು ಮಾರ್ಗಾಧಿಕಾರಿಗಳು ನಿಗಾ ವಹಿಸಬೇಕು. ಮುಖ್ಯೋಪಾಧ್ಯಾಯರು ಮತ್ತು ಪರೀಕ್ಷಾ ಅಧೀಕ್ಷಕರು ಸಮನ್ವಯತೆಯಿಂದ ಪರೀಕ್ಷೆಗಳನ್ನು ನಿರ್ವಹಿಸಬೇಕು. ಜಿಲ್ಲೆಯಲ್ಲಿ ಯಾವುದೇ ಕಹಿ ಘಟನೆಗಳು ಜರುಗದಂತೆ ನಿರ್ಲಕ್ಷ್ಯತನ ವಹಿಸದಂತೆ ನಿಯೋಜಿತ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಬೇಕು ಎಂದರು.

ಡಿಡಿಪಿಐ ವೆಂಕಟೇಶ್ ರಾಮಚಂದ್ರಪ್ಪ ಮಾತನಾಡಿ, ಪರೀಕ್ಷೆ ಸಂದರ್ಭದಲ್ಲಿ ಸಿಸಿ ಕ್ಯಾಮರಾ ಆಫ್ ಆಗದಂತೆ ಕ್ರಮ ವಹಿಸಬೇಕು. ಯಾವುದೇ ತಾಂತ್ರಿಕ ಸಮಸ್ಯೆಯಾದಲ್ಲಿ ಕೂಡಲೇ ಸರಿಪಡಿಸಬೇಕು. ಕ್ಯಾಮರಾ ಒಂದು ನಿಮಿಷಕ್ಕಿಂತ ಹೆಚ್ಚು ಬಂದ್ ಆಗಬಾರದು. ಪರೀಕ್ಷಾ ಕೇಂದ್ರಗಳಲ್ಲಿ ಯುಪಿಎಸ್ ಬ್ಯಾಟರಿ ವ್ಯವಸ್ಥೆ ಇರಬೇಕು. ವೆಬ್‌ಕಾಸ್ಟಿಂಗ್ ಮಾದರಿಯಲ್ಲಿ ನಡೆಯುವ ಪರೀಕ್ಷೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಪರೀಕ್ಷೆಗಳನ್ನು ಭಯದಿಂದ ಎದುರಿಸದಂತೆ ಆತ್ಮವಿಶ್ವಾಸದಿಂದ ಎದುರಿಸಲು, ಜಾಗೃತಿ ಮೂಡಿಸಿ. ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಪರೀಕ್ಷೆ ಬರೆಯುವ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ಕುಡಿಯುವ ನೀರಿನ ಪೂರೈಕೆಯಲ್ಲಿ ತೊಂದರೆ ಇದ್ದಲ್ಲಿ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಕುಡಿಯುವ ನೀರಿನ ಲಭ್ಯತೆಗೆ ಕ್ರಮಕೈಗೊಳ್ಳಬೇಕು ಎಂದರು.

> ಈ ಬಾರಿಯ ವಾರ್ಷಿಕ ಪರೀಕ್ಷೆಯಲ್ಲಿ 21,429 ಹೊಸ ವಿದ್ಯಾರ್ಥಿಗಳು, ಪುನರಾವರ್ತಿತ ಮತ್ತು ಖಾಸಗಿ 1271 ಅಭ್ಯರ್ಥಿಗಳು ಸೇರಿದಂತೆ ಒಟ್ಟು 22700 ವಿದ್ಯಾರ್ಥಿಗಳು ಈ ಬಾರಿಯ ಪರೀಕ್ಷೆ ಎದುರಿಸಲಿದ್ದಾರೆ.
> – ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ

> ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರ ಆಫ್ ಆಗದಂತೆ ಯುಪಿಎಸ್ ಬ್ಯಾಟರಿ ವ್ಯವಸ್ಥೆ ಇರಬೇಕು. ವೆಬ್ ಕಾಸ್ಟಿಂಗ್ ಮಾದರಿಯಲ್ಲಿ ನಡೆಯುವ ಪರೀಕ್ಷೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ, ಸಂಭ್ರಮದಿಂದ ಎದುರಿಸಲು, ಜಾಗೃತಿ ಮೂಡಿಸಿ.
> – ವೆಂಕಟೇಶ್ ರಾಮಚಂದ್ರಪ್ಪ, ಡಿಡಿಪಿಐ

ಜಿಪಂನ ಉಪಕಾರ್ಯದರ್ಶಿ ಭೀಮಪ್ಪ ಲಾಳಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಮುಖ್ಯ ಅಧೀಕ್ಷಕರು, ಇಲಾಖೆಯ ಅಧಿಕಾರಿಗಳಿದ್ದರು.

## ಮೈಕ್ರೋ ನ್ಯೂಸ್

### ಮಾ.25 ರಂದು ಅಂಚೆ ಕಚೇರಿ ದೂರುಗಳ ಡಾಕ್ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ಅಂಚೆ ಇಲಾಖೆ ಬಳ್ಳಾರಿ ವಿಭಾಗದ ವತಿಯಿಂದ ಮಾ.25 ರಂದು ಬೆಳಿಗ್ಗೆ 11 ಗಂಟೆಗೆ ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ 'ಡಾಕ್ ಅದಾಲತ್' ಏರ್ಪಡಿಸಲಾಗಿದೆ.

ಅಂಚೆ ಕಚೇರಿಗಳಿಗೆ ಸಂಬಂಧಿಸಿದಂತೆ ಅಂಚೆ ವಿಷಯಗಳ ಕುರಿತು ಕುಂದು–ಕೊರತೆಗಳಿದ್ದಲ್ಲಿ ತಮ್ಮ ಕುಂದು–ಕೊರತೆಗಳನ್ನು ವಿವರವಾಗಿ ಬರೆದು ಅಂಚೆ ಅಧೀಕ್ಷಕರು, ಬಳ್ಳಾರಿ ವಿಭಾಗ, ಬಳ್ಳಾರಿ–583102 ಈ ವಿಳಾಸಕ್ಕೆ ಮಾ.24 ರ ಸಂಜೆ 04 ಗಂಟೆಯೊಳಗೆ ಅಥವಾ ಇದಕ್ಕೂ ಮುಂಚಿತವಾಗಿ ಕಳುಹಿಸಬೇಕು.

ಕುಂದು–ಕೊರತೆಗಳನ್ನು doballari.ka@indiapost.gov.in ಗೆ ಸಹ ಕಳುಹಿಸಬಹುದು ಎಂದು ಬಳ್ಳಾರಿ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com

Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುವವರು
ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

# ಸಕ್ಕರೆ ಕಾರ್ಖಾನೆ ಆರಂಭಿಸುವತನಕ ಹೋರಾಟ ನಿಲ್ಲದು

### ನ್ಯಾ.ಸಂತೋಷ ಹೆಗ್ಡೆ ಹೇಳಿಕೆ | ರೈತರ ಹೋರಾಟಕ್ಕೆ ಶ್ರೀಗಳು ಸಾಥ್



**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ರೈತರ ಜೀವನಾಡಿ ಬೆಳೆಯಾಗಿರುವ ಕಬ್ಬನ್ನು ನುರಿಸಲು ಸಕ್ಕರೆ ಕಾರ್ಖಾನೆ ಅತ್ಯವಶ್ಯವಾಗಿದ್ದು, ಈ ಭಾಗದಲ್ಲಿ ಕಾರ್ಖಾನೆ ಆರಂಭಿಸಲೇಬೇಕು. ಸಕ್ಕರೆ ಕಾರ್ಖಾನೆ ಆರಂಭಿಸುವವರೆಗೂ ಹೋರಾಟ ನಿಲ್ಲದು ಎಂದು ಹಿರಿಯ ನ್ಯಾಯವಾದಿ ಸಂತೋಷ್ ಹೆಗ್ಡೆ ಹೇಳಿದರು.

ಹಂಪಿ ಶ್ರೀ ವಿರೂಪಾಕ್ಷೇಶ್ವರಸ್ವಾಮಿಯ ದರ್ಶನ ಪಡೆದು ಕರ್ನಾಟಕ ರಾಜ್ಯ ಕಿಸಾನ್ ಜಾಗೃತಿ ಸಂಘದವತಿಯಿಂದ ಸಕ್ಕರೆ ಕಾರ್ಖಾನೆ ಆರಂಭಿಸಲು ಒತ್ತಾಯಿಸಿ ನಡೆದ ಪಾದಯಾತ್ರೆಗೆ ಬುಧವಾರ ಚಾಲನೆ ನೀಡಿ ಮಾತನಾಡಿದರು. ಈ ಭಾಗದಲ್ಲಿ ರೈತರು ಕಬ್ಬು ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಇದ್ದ ಸಕ್ಕರೆ ಕಾರ್ಖಾನೆ ಮುಚ್ಚಲ್ಪಟ್ಟಿದೆ. ರೈತರು ಬೆಳೆದ ಕಬ್ಬನ್ನು ಬೇರೆಡೆ ಸಾಗಿಸಲು ಹರಸಾಹಸಪಡುವಂತಾಗಿದೆ. ಸಣ್ಣ ಅತಿಸಣ್ಣ ರೈತರು ಕೃಷಿಯಿಂದಲೇ ವಿಮುಖರಾಗುತ್ತಿದ್ದಾರೆ. ಸರ್ಕಾರ ರೈತರ ಬೇಡಿಕೆಯನ್ನು ಮತ್ತು ರೈತರು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಸಕ್ಕರೆ ಕಾರ್ಖಾನೆ ಆರಂಭಿಸಲು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮರಿಯಮ್ಮನಹಳ್ಳಿಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಜಿ.ನಾಗಲಾಪುರದ ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು ಇದ್ದರು. ಹಂಪಿಯಿಂದ ಹೊಸಪೇಟೆವರೆಗೆ ರೈತರು ಪಾದ ಯಾತ್ರೆ ನಡೆಸಿದರು. ರೈತ ಸಂಘಟನೆ ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು, ರೈತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಗಾಣಗಟ್ಟೆ ಮಾಯಮ್ಮ ದೇವಿ ರಥೋತ್ಸವ ಅದ್ದೂರಿ

### ಹಗ್ಗವಿಲ್ಲದೆ ತೇರು ಎಳೆದ ಭಕ್ತರು



**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಗಾಣಗಟ್ಟೆ ಗ್ರಾಮದ ಮಾಯಮ್ಮ ದೇವಿಯ ರಥೋತ್ಸವವು ಬುಧವಾರ ಇಳಿ ಸಂಜೆಯಲ್ಲಿ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವಕ್ಕು ಮುನ್ನ ಮಾಯಮ್ಮ ದೇವಿಯ ಪಟಾಕ್ಷಿಯನ್ನು 3.1 ಲಕ್ಷ ರೂ. ಗೆ ಅಂಜಿನಪ್ಪ ಹರಾಜು ಪ್ರಕ್ರಿಯೆಯಲ್ಲಿ ಪಡೆದುಕೊಂಡರು. ರಥೋತ್ಸವಕ್ಕೆ ಮೊದಲು ದೇವಿಯ ಉತ್ಸವ ಮೂರ್ತಿಯನ್ನು ಸಕಲ ವಾದ್ಯಗಳೊಂದಿಗೆ ತಂದು ರಥದ ಸುತ್ತ ಪ್ರದಕ್ಷಿಣೆ ಹಾಕಿ ಧಾರ್ಮಿಕ ಕಾರ್ಯವನ್ನು ನೆರವೇರಿಸಿ. ದೇವಿಯನ್ನು ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಪಟಾಕ್ಷಿ ಸವಾಲು ಪ್ರಕ್ರಿಯೆ ಮುಗಿಯುತ್ತಿದ್ದಂತೆ ರಥವು ಮುಂದೆ ಸಾಗಿತು ನೆರದ ಭಕ್ತಸ್ತೋಮವು ಜಯಘೋಷ ಹಾಕಿ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು.ಮಾಯಮ್ಮ ದೇವಿಯ ರಥೋತ್ಸವವನ್ನು ವೀಕ್ಷಿಸಲು ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಸೇರಿ ಆಂಧ್ರಪ್ರದೇಶದ ನಾನಾ ಭಾಗಗಳಿಂದ ಭಕ್ತರು ಆಗಮಿಸಿದ್ದರು. ಕೆಲ ಭಕ್ತರು ಪಾದಯಾತ್ರೆಯಲ್ಲಿ ಬಂದು ತಮ್ಮ ಹರಕೆಯನ್ನು ತೀರಿಸಿದರು.

ಕೂಡ್ಲಿಗಿ ಕ್ಷೇತ್ರದ ಶಾಸಕ ಶ್ರೀನಿವಾಸ್, ರಘು ಮೂರ್ತಿ ಚಳ್ಳಕೆರೆ ಶಾಸಕರು, ದೇವೇಂದ್ರಪ್ಪ ಜಗಳೂರು ಶಾಸಕರು, ಬಸವಂತಪ್ಪ ಮಾಯಕೊಂಡ ಶಾಸಕರು, ರಾಮಚಂದ್ರಪ್ಪ ಮಾಜಿ ಶಾಸಕರು ಜಗಳೂರು ಇವರುಗಳು ಕೂಡಾ ರಥೋತ್ಸವದಲ್ಲಿ ಪಾಲ್ಗೊಂಡು ದೇವಿಯ ದರ್ಶನ ಪಡೆದು, ಭಕ್ತಿ ಸಮರ್ಪಿಸುವ ಮೂಲಕ, ದೇವಿಯ ಕೃಪೆಗೆ ಪಾತ್ರರಾದರು.

ರಥಕ್ಕೆ ಎಲ್ಲೆಡೆ ಹಗ್ಗಕಟ್ಟಿ ಎಳೆಯುವ ದೃಷ್ಯವನ್ನು ಕಂಡಿದ್ದೇವೆ ಆದರೆ ಇಲ್ಲಿ ಹಗ್ಗವನ್ನು ಹಾಕದೆ ಭಕ್ತರು ರಥವನ್ನು ತಳ್ಳಿಕೊಂಡು ಹೋಗುವ ಪ್ರಸಂಗವನ್ನು ಸಹಸ್ರಾರು ಭಕ್ತರು ಕಣ್ತುಂಭಿಕೊಳ್ಳುವಂತದ್ದು ಇಲ್ಲಿನ ರಥೋತ್ಸವದ ವಿಶೇಷ.

For Events Ads & News Coverage
Contact: M: 94486 33038
www.hampitimes.com/epaper.hampitimes.com

# ಮಾನವ ಧರ್ಮದಿಂದ ವಿಶ್ವಕ್ಕೆ ಶಾಂತಿ

### ಸರ್ವರಿಗೂ ಸಮಬಾಳು–ಸಮಪಾಲು ಎಂದು ರೇಣುಕಾಚಾರ್ಯರು ಅಂದೇ ಹೇಳಿದ್ದರು ಎಂದ ಡಿಸಿ ಎಂ.ಎಸ್.ದಿವಾಕರ



**ಹಂಪಿ ಟೈಮ್ಸ್ ಹೊಸಪೇಟೆ**

ಜಾತಿ ಸಂಕೋಲೆಗಳಿಂದ ಹೊರಬಂದು ಮಾನವ ಧರ್ಮ ಒಂದೇ ಎಂಬ ಭಾವನೆ ಮೂಡಿಸಿಕೊಂಡಾಗ ಮಾತ್ರ ವಿಶ್ವಕ್ಕೆ ಶಾಂತಿ ಎಂಬುದನ್ನು ರೇಣುಕಾಚಾರ್ಯರು ಅಂದೇ ಜನರಲ್ಲಿ ಜಾಗೃತಿ ಮೂಡಿಸಿದ್ದರು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಾರ್ಯಾಲಯದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೋತ್ಸವದಲ್ಲಿ ಬುಧವಾರ ಮಾತನಾಡಿದರು. ರೇಣುಕಾಚಾರ್ಯರು ಸನ್ಯಾಸಿಯಾಗಿದ್ದುಕೊಂಡು ಜನರಲ್ಲಿ ಜಾಗೃತಿ ಮೂಡಿಸಲು ದೇಶ ಸಂಚಾರ ಗೈದಿದ್ದರು.ಆಂಧ್ರ ಪ್ರದೇಶದ ಕೊಲ್ಲಿ ಕೊಲ್ಲಿ ಪಾಕೀಯ 18 ಮಠಗಳಿಗೆ ಜಗದ್ಗುರುಗಳಾಗಿದ್ದರು. ಅಂದೇ ಎಲ್ಲರನ್ನು ಒಂದುಗೂಡಿಸುವ ನಿಟ್ಟಿನಲ್ಲಿ ಧರ್ಮಪ್ರಚಾರಕ್ಕಾಗಿ ಜಾಗೃತಿ ಸಂಚಾರ ಕೈಗೊಂಡಿದ್ದರು. ಮಾನವ ಧರ್ಮಕ್ಕೆ ಜಯವಾಗಲಿ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದುನ್ನು ತಿಳಿಸಿದ್ದರು.

ರೇವಣಸಿದ್ಧರು ದೇಶಸಂಚಾರದಲ್ಲಿದ್ದಾಗ ಒಮ್ಮೆ ಅಂದಿನ ಜೈನಧರ್ಮದ ಬಿಜ್ಜಳ ರಾಜರ ಮನೆಯಲ್ಲಿ ಉಳಿದುಕೊಳ್ಳುತ್ತಾರೆ. ಬಿಜ್ಜಳ ಮಹರಾಜರು ರೇವಣಸಿದ್ಧರನ್ನ ಮೆಚ್ಚಿ ತಮ್ಮ ಮಗಳನ್ನು ಮದುವೆಯಾಗಬೇಕೆಂದು ಕೋರುತ್ತಾರೆ. ನಾನು ಸನ್ಯಾಸಿ ಮದುವೆಯಾಗಲಾರೆ ಎಂದು ತಿಳಿಸುತ್ತಾರೆ. ಆದರೂ ನಿಮ್ಮ ಸೇವೆಗೆ ಎಂದು ಮನವೊಲಿಸಿ ತಮ್ಮ ಮಗಳನ್ನು ರೇವಣಸಿದ್ದರಿಗೆ ಕೊಟ್ಟು ಮದುವೆ ಮಾಡುತ್ತಾರೆ. ಈ ಮದುವೆಗೆ ಪ್ರಕೃತಿಯೇ ಸಾಕ್ಷಿಯಾಗುತ್ತದೆ ಎನ್ನುವುದನ್ನು ರೇವಣಸಾಂಗತ್ಯದಲ್ಲಿ ವೈಭವಯುತವಾಗಿ ತಿಳಿಸಿದ್ದಾರೆ ಎಂದರು.

ಅನಾವುಗಳು ಮಾನವ ಧರ್ಮವನ್ನು ಒಪ್ಪಿ ಅಪ್ಪಿಕೊಂಡಾಗ ಮಾತ್ರ ಶಾಂತಿ ನೆಮ್ಮದಿ ಕಾಣಲು ಸಾಧ್ಯ ಎಂದರು.

ಸಭೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಗೊಗ್ಗ ಚೆನ್ನ ಬಸವರಾಜ, ಬೇಡ ಜಂಗಮ ಸಮಾಜದ ಜಿಲ್ಲಾಧ್ಯಕ್ಷ ಎಸ್. ಎಂ. ಕಾಶಿನಾಥಯ್ಯ ಉಪಾಧ್ಯಕ್ಷ ಎ. ಎಂ. ಬಸವರಾಜ್ ರವರು, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಸಂಗಪ್ಪ, ಲೇಖಕ ಬಿ.ಎಂ.ರಾಜಶೇಖರ, ಹಿರಿಯ ಮುಖಂಡರಾದ ಸಾಲಿ ಸಿದ್ದಯ್ಯಸ್ವಾಮಿ, ಎಚ್.ವಿ.ಶರಣ ಸ್ವಾಮಿ, ಬಿ.ಎಂ.ಸೋಮಶೇಖರ, ಎಂ.ಎಂ. ವಿರೂಪಾಕ್ಷಯ್ಯ ಸ್ವಾಮಿ, ಮಧುರಚೆನ್ನಶಾಸ್ತ್ರಿ, ಕಿಚಿಡಿಕೊಟ್ರೇಶ, ಶೀಲಾ ಕುಮಾರಸ್ವಾಮಿ, ಅನ್ನಪೂರ್ಣಮ್ಮನ ಸೇರಿದಂತೆ ಇತರರು ಇದ್ದರು.

## ಬೆಳಕಿನ ಹಾದಿ

# ಜೀವನ ಹರಿಯುವ ನೀರಾಗಲಿ

■ ಜಯಶ್ರೀ ಎಂ. ಕರ್ಜಗಿ. ಹುಬ್ಬಳ್ಳಿ



ಒಂದೂರಲ್ಲಿ ಗಂಡ ಹೆಂಡತಿ ಇದ್ದರು. ಮದುವೆಯಾದ ಹೊಸದರಲ್ಲಿ ಹೆಂಡತಿಗೆ ಎಲ್ಲವೂ ಚೆಂದವಾಗಿಯೇ ಇತ್ತು. ಗಂಡನ ಜೊತೆ ಹಾಗೆ ಇರಬೇಕು, ಹೀಗೆ ಇರಬೇಕು ಎಂದು ನಾನಾ ರೀತಿಯ ಕನಸು ಕಟ್ಟಿಕೊಂಡಿದ್ದಳು. ಹುಟ್ಟಿದಾಗಿನಿಂದ ಮದುವೆಯವರೆಗೂ ಹಳ್ಳಿಯಲ್ಲಿ ಜೀವನ ಮಾಡಿದ್ದ ಆಕೆಗೆ ಪಟ್ಟಣದ ಜೀವನ ಹೊಸದೆನಿಸಿತ್ತು. ಹೊಸ ಜೀವನದಲ್ಲಿ ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಂಡಿದ್ದಳು. ಆದರೆ ಕನಸಿನ ಗೋಪುರ ಬಹಳ ದಿನ ಉಳಿಯಲಿಲ್ಲ. ಬರುಬರುತ್ತಾ ಅತ್ತೆ ಮಾವನ ಮನೆ ನರಕವಾಗತೊಡಗಿತು. ಬೇರೆ ಮನೆ ಮಾಡಲು ಗಂಡನಿಗೆ ಕೇಳಿಕೊಂಡಳು. ಅನಿವಾರ್ಯವಾಗಿ ಗಂಡ ಬೇರೆ ಮನೆ ಮಾಡಿದ. ಮನೆ ಏನೋ ಬೇರೆಯಾಯಿತು. ಆದರೆ ಗಂಡನ ನಡವಳಿಕೆಬದಲಾಯಿತು.ಗಂಡಮನಸ್ಸಿಗೆಬಂದಂತೆನಡೆದುಕೊಳ್ಳತೊಡಗಿದ. ಮನೆಗೆ ತಡರಾತ್ರಿಯಲ್ಲಿ ಬರತೊಡಗಿದ. ಕಾರಣ ಕೇಳಿದರೆ ಏನಾದರೊಂದು ನೆಪ ಹೇಳುತ್ತಿದ್ದ. ದುಡಿಮೆ ಕಡಿಮೆಯಾಗಿತ್ತು. ಸಾಲ ಹೆಚ್ಚಾಗಿತ್ತು. ಕೊನೆಗೆ ಅನಿವಾರ್ಯವಾಗಿ ಗಂಡನನ್ನು ಕರೆದುಕೊಂಡು ವಾಪಾಸು ಅತ್ತೆ ಮಾವನ ಬಳಿಗೆ ಹೋಗಲೇಬೇಕಾಯಿತು. ಹೀಗೆ ಅವರ ಜೀವನ ಕುಂಟುಂತ್ತಾ ಸಾಗಿತು.

ಋಣಾನುಬಂಧ ಅನ್ನೋದು ಹೇಗೆ ಅಂದರೆ ಎಲ್ಲಿಯೋ ಇದ್ದವರನ್ನು, ಗೊತ್ತು ಪರಿಚಯ ಇಲ್ಲದವರನ್ನ ಪರಿಚಯ ಮಾಡಿಸುತ್ತೆ. ಅವರು ಯಾರು? ಅವರ ಕುಟುಂದ ಹಿನ್ನೆಲೆ ಏನು? ಅವರ ಕುಲ, ಗೋತ್ರ ಏನೂ ಗೊತ್ತಿರಲ್ಲ. ಆದರೂ ಅವರನ್ನು ಸೇರಿಸಿ ಬಿಡುತ್ತೆ. ಇಂತವರ ಜೊತೆ ಬಾಳು ಎಂದು ದೇವರು ಮೊದಲೇ ನಿರ್ಧಾರ ಮಾಡಿ ಬಿಡುತ್ತಾನೆ. ಕಷ್ಟನೋ, ಸುಖನೋ ಜೊತೆಗೆ ಬಾಳಬೇಕೆನ್ನುವ ಅನಿವಾರ್ಯತೆ ಇರುತ್ತೆ. ಹುಟ್ಟು, ಬಾಲ್ಯ, ಯೌವನ, ಮದುವೆ, ಮಕ್ಕಳು, ಮುಪ್ಪು ಹೀಗೆ ಇರಬೇಕು ಎಂದು ಭಗವಂತ ಮೊದಲೇ ನಿಶ್ಚಯ ಮಾಡಿರುತ್ತಾನೆ. ಇರುವಷ್ಟು ದಿನ ಜಗಳ, ಕೋಪ, ಮನಸ್ತಾಪ ಇದ್ದೇ ಇರುತ್ತೆ.

ಭೂಮಿ ಮೇಲೆ ಪ್ರೀತಿ ಶಾಶ್ವತ ಅಲ್ಲ ಗೊತ್ತಿದ್ದರೂ ನಾವುಗಳು ಬದಲಾಗಲ್ಲ. ನಾವು ಹೇಳಿದ ಹಾಗೆ ನಡೆಯಬೇಕು, ಅಂದುಕೊಂಡಂತೆ ಆಗದಿದ್ದಾಗ ದೇವರು ಕೈ ಹಿಡಿಯಲಿಲ್ಲ ಎಂದು ದೇವರನ್ನು ಬಯ್ಯುತ್ತೇವೆ. ಕುರುಡು ಕಣ್ಣಿಗಿಂತ ಮೆಳ್ಳೆಗಣ್ಣು ವಾಸಿ ಎನ್ನುವ ಹಾಗೆ ಒಂದು ಒಳ್ಳೆಯ ಜೀವನ ಕಟ್ಟಿಕೊಂಡಿರುವಾಗ ಜೀವನವೇ ವ್ಯರ್ಥ ಮಾಡದೇ ಬದುಕಬೇಕು. ಕೆಲವೊಂದು ಆದರ್ಶಗಳು ಹೇಳೋಕೆ ಬಹಳ ಚೆಂದ. ಆದರೆ ಹಾಗೆ ಇರಲು ತುಂಬಾ ಕಷ್ಟ. ನಾವು ಹೀಗೆ ಬಆಳಬೇಕು, ಹಾಗೆ ಬದುಕಬೇಕು ಎನ್ನುವ ನಿರ್ಧಾರ ಸೃಷ್ಟಿಕರ್ತನದ್ದು. ಯಾವುದನ್ನು ಪಡಕೋಬೇಕೋ ಅದು ಲೇಟಾದರೂ ಪಡೆದುಕೊಂಡೇ ಪಡಕೋತೀವಿ. ನಮ್ಮ ಸುಂದರವಾದ ಬದುಕನ್ನು ಕಟ್ಟಿಕೊಳ್ಳುವುದು ಕೂಡಾ ನಮ್ಮ ಕೈಯಲ್ಲಿ ಇರುತ್ತೆ. ಯಾವುದಕ್ಕೂ ಬಗ್ಗದೇ, ಜಗ್ಗದೇ ಜೀವನದ ಪ್ರಯಾಣವನ್ನು ಮುಂದುವರೆಸಬೇಕು. ಕಷ್ಟನೋ, ಸುಖನೋ ಬದುಕು ಬಂದಂತೆ ಸಾಗಿಸಬೇಕು. ಹರಿಯುವ ನೀರಿನ ಹಾಗೆ ಯಾವುದೇ ಕಲ್ಮಶವಿಲ್ಲದೇ ಸ್ವಚ್ಛವಾಗಿ ಬದುಕಬೇಕು. ಆಗ ನಮ್ಮ ಜನ್ಮ ಸಾರ್ಥಕ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038


## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**


# ಮನಿಷಾ ಸಿದ್ದಿಗೆ ಸಿದ್ಧಿಸಿದ ಕುಸ್ತಿ ಕಲೆ

## ಹಂಪಿ ಉತ್ಸವ ಕುಸ್ತಿ ಸ್ಪರ್ಧೆಯಲ್ಲಿ ಮಹಿಳಾ ಕಂಠೀರವ-2025 ಪ್ರಶಸ್ತಿ ಮುಡಿಗೇರಿಸಿಕೊಂಡ ಮನಿಷಾ ಉತ್ಸಾಹವಿದೆ ಮತ್ತಷ್ಟು ಪ್ರೋತ್ಸಾಹ ಬೇಕಿದೆ | ಬಡತನದಲ್ಲೂ ಅರಳಿದ ಸಿದ್ಧಿ ಜನಾಂಗದ ಪ್ರತಿಭೆ

ಇತ್ತೀಚಿನ ಕ್ರೀಡಾ ಸಾಧಕರನ್ನು ಗಮನಿಸಿದಾಗ ಅದರಲ್ಲೂ ವಿಶೇಷವಾಗಿ ಕುಸ್ತಿ ಕ್ರೀಡೆಯನ್ನು ಅವಲೋಕಿಸಿದಾಗ ಬಡತನದ ತೊಟ್ಟಿಲಲ್ಲಿ ಬೆಳೆದ ಕ್ರೀಡಾಪಟುಗಳಿಂದಲೇ ವಿಶೇಷ ಸಾಧನೆ ಆಗಿರುವುದು ಸತ್ಯ.

ಅಪ್ಪನ ಪ್ರೀತಿ, ನೆರಳನಲ್ಲಿಯೇ ಮೇಲೆದ್ದುಬರಬೇಕೆಂದು ಬಯಸಿದ್ದ ಬಾಲಕಿಗೆ ವಿಧಿ ಆಕೆಯ ಬಾಲ್ಯದಲ್ಲಿಯೇ ತಂದೆಯನ್ನು ಇನ್ನಿಲ್ಲದಂತೆ ಮಾಡಿತ್ತು. ಬಡತವಿದ್ದರೂ ಆಸಕ್ತಿ, ಇಚ್ಛಾಶಕ್ತಿ ಕುಂದಿರಲಿಲ್ಲ. ತಂದೆ ಜುವಾಂವ ಸಿದ್ದಿಯನ್ನು ಕಳೆದುಕೊಂಡರೂ ಧೃತಿಗೆಡದೆ ತಾಯಿ ಆರೈಕೆಯಲ್ಲಿ, ಆಶೀರ್ವಾದದ ಬಲದಿಂದಾಗಿ 17ನೇ ವಯಸ್ಸಿನಲ್ಲೇ ಅದ್ಭುತ ಕುಸ್ತಿ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾಳೆ. ಸಿದ್ಧಿ ಜನಾಂಗದ ಕುವರಿ ಕರುನಾಡಿನ ಆಸ್ತಿಯಾಗಿ ತರಬೇತುದಾರರ ಗರಡಿಮನೆಯಲ್ಲಿ ಬೆಳೆಯುತ್ತಿದ್ದಾಳೆ.

ಸೋತನೆಂದು ಭಯಪಡದೆ, ಶ್ರಮಪಟ್ಟು ಕುಸ್ತಿ ಕ್ರೀಡೆಯನ್ನು ಮೈಗೂಡಿಸಿಕೊಂಡು ಚೆನ್ನಾಗಿ ಕುಸ್ತಿ ಆಡಿ ಸಾಧನೆ ಮಾಡಿ ತೋರಿಸು ಆಗ ನಮ್ಮನ್ನು ಅಗಲಿದ ತಂದೆಗೆ ತೃಪ್ತಿಯಾಗುತ್ತದೆ ಕಲಿಸಿದ ಗುರುಗಳಿಗೆ ಸಾರ್ಥಕತೆ ಇರುತ್ತದೆ. ಮುಂದೊಂದು ದಿನ ಇಡೀ ರಾಷ್ಟವೇ ನಿನ್ನ ಸಾಧನೆಗೆ ಬೆನ್ನುತಟ್ಟಿ ಪ್ರೋತ್ಸಾಹಿಸುತ್ತದೆ. ಧೃತಿಗೆಡಬೇಡ ಎಂದು ಹಾಸ್ಟೆಲ್ ಒಂದರಲ್ಲಿ ಕಾಯಕ ನಿರತರಾಗಿ ಸಾಕುತ್ತಿರುವ ನನ್ನ ತಾಯಿ ರಮೀಟ ರವರು ಸದಾ ಪ್ರೋತ್ಸಾಹಿಸುತ್ತಾರೆ ಎಂದು ನುಡಿಯುತ್ತಾರೆ ಸಾಧಕಿ ಮನಿಷಾ.

5ನೇತರಗತಿ ವಿದ್ಯಾಭ್ಯಾಸ ಮಾಡುವಾಗ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹರಿಯಾಳ ಕುಸ್ತಿ ಹಾಸ್ಟೆಲ್ಗೆ ಆಯ್ಕೆ ಪ್ರಕ್ರಿಯೆ ಇದೆ ಎಂದು ಅಂತರಾಷ್ಟ್ರೀಯ ತರಬೇತುದಾರರಾದ ತುಕಾರಾಂ ರವರು ಕಾರ್ಮೆಲ್ ಹಿರಿಯ ಪ್ರಾಥಮಿಕ ಪಾಠ ಶಾಲೆಗೆ ಭೇಟಿ ನೀಡುತ್ತಾರೆ. ಅಲ್ಲಿನ ದೈಹಿಕ ಶಿಕ್ಷಣ ಶಿಕ್ಷಕ ಚರ್ಚಿಲ್ ರವರೊಂದಿಗೆ ಚರ್ಚಿಸಿ ಆಯ್ಕೆ ಪ್ರಕ್ರಿಯೆಗೆ ವಿದ್ಯಾರ್ಥಿಗಳನ್ನು ಕಳಿಸಿ ಕೊಡಲು ಕೇಳಿಕೊಳ್ಳುತ್ತಾರೆ. ಕಳಿಸಿಕೊಟ್ಟ ವಿದ್ಯಾರ್ಥಿಗಳಲ್ಲಿ 2018-19 ಮನಿಷಾ ಆಯ್ಕೆಗೊಳ್ಳುತ್ತಾರೆ. ಶಿಕ್ಷಕರ ಮತ್ತು ತರಬೇತುದಾರರ ಶ್ರಮ ವ್ಯರ್ಥವಾಗದೆ ಕ್ರೀಡಾಪಟುವಿನ ದುಡಿಮೆ ಸಾರ್ಥಕವಾಗಿ ಸಾಧನೆಯ ರೂಪದಲ್ಲಿ ಹೊರ ಹೊಮ್ಮಿದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful HAMPI TIMES E-paper

ಸದ್ಯ ಬಿ.ಜಿ.ವಿ.ಎಸ್. ರಾಂನಗರ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮನೀಷಾ ಮುಂದೆ ಪದವಿ ಪಡೆದು ಪೊಲೀಸ್ ಅಥವಾ ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ



ಇವರಿಗೆ ಕಲಿಸಿದ ಎಲ್ಲಾ ಶಿಕ್ಷಕರು, ಉಪನ್ಯಾಸಕರು ಹಾಗೂ ಬೋಧಕೇತರ ವರ್ಗದವರ ಸಹಕಾರ ತೃಪ್ತಿನೀಡಿದೆ.

ಸಿದ್ದಿ ಜನಾಂಗದಲ್ಲಿ ಜನಿಸಿರುವ ನಾನು ಪ್ರಕೃತಿಯ ಮಡಿಲಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಬೇಕು ಆ ಮೂಲಕ ಪ್ರಕೃತಿ ಮಾತೆಗೆ ಸೇವೆ ಸಲ್ಲಿಸಬೇಕು ಹಾಗೂ ಅಲ್ಲಿ ನೆಲೆಸಿರುವ ಸಿದ್ದಿ ಜನಾಂಗದ ಮಕ್ಕಳಿಗೆ ಕುಸ್ತಿ ಕ್ರೀಡೆಯನ್ನು ಕಲಿಸಬೇಕೆಂಬ ಆಸೆ ಮತ್ತು ಪ್ರಕೃತಿ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

ದೇಶಕ್ಕೆ ಒಲಿಂಪಿಕ್ಸ್‌ನಲ್ಲಿ ಪದಕ ತಂದು ಕೊಡುವ ಆಸೆಯನ್ನು ಇವರು ಹೊಂದಿದ್ದು ಇದಕ್ಕಾಗಿ ಕಠಿಣ ಪರಿಶ್ರಮವನ್ನು ಪಡುತ್ತಿದ್ದಾರೆ ಇಲ್ಲಿಯವರೆಗಿನ ಸಾಧನೆಗೆ ಈಗಾಗಲೇ ಸರ್ಕಾರದಿಂದ, ಕ್ರೀಡಾ ಇಲಾಖೆಯಿಂದ, ಸ್ಥಳೀಯ ಶಾಸಕರಿಂದ, ತರಬೇತುದಾರರಿಂದ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳಿಂದ ಸಹಕಾರ ದೊರೆತಿದ್ದು ಅವರೆಲ್ಲರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತಾರೆ.

ಕುಸ್ತಿ ತರಬೇತುದಾರರಾದ ಕಾಡೆಶ್ ನ್ಯಾಮಗೌಡ, ಬಾಲಕೃಷ್ಣ, ಶಿವಾನಂದ, ಮಮತಾ ಕೇಳೋಜಿ,ಶಿವಪ್ಪ ಹಾಗೂ ಸದ್ಯದ ತರಬೇತುದಾರರಾದ ತುಕಾರಾಂ ಗೌಡ ರವರ ಸಹಕಾರ ನೆನೆಯುತ್ತಾರೆ. ಪ್ರಸ್ತುತ ಪರಿಶಿಷ್ಟ ಪಂಗಡ ಕ್ರೀಡಾ ವಸತಿ ನಿಲಯ ಹಳಿಯಾಳ, ಉತ್ತರ ಕನ್ನಡ ಇಲ್ಲಿ ವಾಸ್ತವ್ಯದ ವ್ಯವಸ್ಥೆ ಚೆನ್ನಾಗಿದ್ದು ನಾವೆಲ್ಲರೂ ಮಹಿಳಾ ಕ್ರೀಡಾಪಟುಗಳಾಗಿದ್ದರಿಂದ ಮಹಿಳಾ ಡಾಕ್ಟರ್ ಅವಶ್ಯಕತೆ ಇದ್ದು ವ್ಯವಸ್ಥೆ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತಾರೆ.

ಮನಿಷಾ ಸಾಕಷ್ಟು ಸಾಧನೆಯನ್ನು ಮಾಡಿದ್ದು ಮತ್ತು ಮುಂದೆಯೂ ಮಾಡಲಿದ್ದಾರೆ ಈಗಾಗಲೇ ಕ್ರೀಡಾ ಇಲಾಖೆ, ಸರ್ಕಾರ ಹಾಗೂ ಸ್ಥಳೀಯ ಶಾಸಕರಾದ ಆರ್‌ವಿ ದೇಶಪಾಂಡೆ ರವರು, ಸ್ಥಳೀಯ ಸಂಘ ಸಂಸ್ಥೆಗಳು ಹಾಗೂ ಪಕ್ಷಭೇದ ಮರೆತು ಎಲ್ಲಾ ರಾಜಕೀಯ ಮುಖಂಡರು ನೀಡಿದ ಸಹಕಾರದಿಂದ ಇಷ್ಟೆಲ್ಲ ಸಾಧಿಸಲು ಸಾಧ್ಯವಾಗಿದೆ ಮುಂದೆಯೂ ಇನ್ನಷ್ಟು ಸಹಕಾರ ನಿರೀಕ್ಷೆಯಲ್ಲಿದ್ದೇವೆ ಎಂದು ನುಡಿಯುತ್ತಾರೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಳಿಯಾಳ, ಉತ್ತರ ಕನ್ನಡದ ಅಂತರಾಷ್ಟ್ರೀಯ ಕುಸ್ತಿ ತರಬೇತುದಾರರಾದ ತುಕಾರಾಂ ಗೌಡರವರು.

ಇಡೀ ರಾಜ್ಯದ ಕುಸ್ತಿ ಪ್ರೇಮಿಗಳ ಆಸೆ ಒಂದೇ ಒಲಂಪಿಕ್ಸ್ ನಲ್ಲಿ ಕುಸ್ತಿಗೆ ಪದಕ ಗೆಲ್ಲಬೇಕೆಂಬುದು ಅದು ನನ್ನ ಮಗಳಿಂದ ಸಾಧ್ಯವಾದರೆ ನನ್ನಷ್ಟು ಭಾಗ್ಯವಂತೆ ಯಾರು ಇಲ್ಲ, ಆ ಶಕ್ತಿ ನನ್ನ ಮಗಳಿಗೆ ಭಗವಂತ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ ಹಾಗೂ ಕುಸ್ತಿ ಪ್ರೇಮಿಗಳಲ್ಲಿ ಸಹಕಾರವನ್ನು ನಿರೀಕ್ಷಿಸುತ್ತೇನೆ, ಮಗಳು ಗೆದ್ದು ಬರಲಿ ಎಂದು ಹಾರೈಸುತ್ತೇನೆ, ಕುಸ್ತಿ ತರಬೇತುದಾರರ ಸಹಕಾರವನ್ನು ಸದಾ ಸ್ಮರಿಸುತ್ತೇನೆ ಎನ್ನುತ್ತಾರೆ ತಾಯಿ ರೇಮೀಟ ಜೀವಾಂವ ಸಿದ್ದಿ.

ಬಡತನದ ಬೇಗೆಯಲ್ಲಿ ಬೆಂದು ಬೂದಿಯಂತಾಗದೆ ಮಿಂದು ಸಾಧಕಿಯಾಗಿ ಸಾಧನೆ ಮಾಡುತ್ತಿದ್ದೀರಿ, ನಿಮಗೆ ಎಲ್ಲರ ಸಹಕಾರ ದೊರೆತು ಅಂತರಾಷ್ಟ ಮಟ್ಟದಲ್ಲಿ ನಿಮ್ಮ ಸಾಧನೆ ಬೆಳಗುವಂತಾಗಲಿ ಎಂದು ಹಾರೈಸೋಣ.

**ಕ್ರೀಡಾ ಸಾಧನೆ:** 2024-25 (ಉತ್ತರ ಪ್ರದೇಶ- ಮೀರತ್)ಸ್ಕೂಲ್ ಗೇಮ್ಸ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ಜರುಗಿದ 19 ವಯೋಮಿತಿಯ 72 ಕೆ.ಜಿ.ದೇಹ ತೂಕದ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.

2023-24(ಮಧ್ಯ ಪ್ರದೇಶ- ಒದಿಸ್ಸಾ)ಸ್ಕೂಲ್ ಗೇಮ್ಸ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ಜರುಗಿದ 17 ವಯೋಮಿತಿಯ 73 ಕೆ.ಜಿ.ದೇಹ ತೂಕ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.

2023 (ಉತ್ತರ ಪ್ರದೇಶ- ಗೊಂಡಾ)ರೆಸ್ಲಿಂಗ್ ಫ್ರೆಡ್ರೇಷನ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ಜರುಗಿದ 17 ವಯೋಮಿತಿಯ 69 ಕೆ.ಜಿ.ದೇಹ ತೂಕದ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.

2022 ರೆಸ್ಲಿಂಗ್ ಫೆಡರೇಶನ್ ಆಫ್ ಇಂಡಿಯಾ ಹರಿಯಾಣದ ರೋಥಕ್ ಇಲ್ಲಿ ನಡೆದ 15 ವಯೋಮಿತಿಯ 62 ಕೆ.ಜಿ. ದೇಹ ತೂಕದ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ ಬೆಳ್ಳಿ ಪದಕವನ್ನು ಪಡೆದಿರುತ್ತಾರೆ.

ಇದಲ್ಲದೆ ರಾಷ್ಟದ ನಾನಾ ರಾಜ್ಯಗಳಲ್ಲಿ ರೆಸ್ಲಿಂಗ್ ಫೆಡರೇಶನ್ ಆಫ್ ಇಂಡಿಯಾ ನಡೆಸಿದ ಅಂದರೆ 2022 ಯು -17 ಉತ್ತರ ಪ್ರದೇಶ,ಯು-15 ರಾಂಚಿ,ಪಾಟ್ನಾ, 2021 ಯು-15 ರಾಂಚಿ ಮತ್ತು 2024 ಯು-17 ಉತ್ತರಾಖಾಂಡ ಇಲ್ಲಿ ನಡೆದ ರಾಷ್ಟಮಟ್ಟ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಕರ್ನಾಟಕಕ್ಕೆ ಕೀರ್ತಿ ತಂದಿರುತ್ತಾರೆ ಇವರು ಒಟ್ಟಾರೆ 09 ರಾಷ್ಟಮಟ್ಟ,05 ಸ್ಕೂಲ್ ಗೇಮ್ ರಾಷ್ಟಮಟ್ಟ ಹಾಗೂ ಒಟ್ಟಾರೆ 15 ರಿಂದ 20 ಬಾರಿ ರಾಜ್ಯಮಟ್ಟದ ವಿವಿಧ ದೇಹ ತೂಕದ ವಿಭಾಗಗಳ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಕರ್ನಾಟಕ ರಾಜ್ಯಕ್ಕೆ ಕೀರ್ತಿ ತಂದಿರುತ್ತಾರೆ.

ಇತ್ತೀಚೆಗೆ ವಿಜಯನಗರದಲ್ಲಿ ನಡೆದ ಹಂಪಿ ಉತ್ಸವದ ಮಹಿಳಾ ಕುಸ್ತಿ ಸ್ಪರ್ಧೆಯಲ್ಲಿ ಭಾಗವಹಿಸಿ "ಮಹಿಳಾ ಕಂಠೀರವ-2025" ಪ್ರಶಸ್ತಿಯನ್ನು ಪಡೆದಿರುತ್ತಾರೆ.

# ನಿರೀಕ್ಷೆ ಇಲ್ಲದ ಪ್ರತಿಫಲ

ಅದೊಂದು ನಿರ್ಜನ ಪ್ರದೇಶ. ಹೊಲದಿಂದ ತನ್ನ ಮನೆಯ ಕಡೆ ಹೊರಟಿದ್ದ ಫ್ಲೆಮಿಂಗ್ ಎಂಬ ರೈತನಿಗೆ ಯಾರೋ ಒಬ್ಬ ಬಾಲಕ ಜೋರಾಗಿ ಆರ್ತನಾದ ಮಾಡುತ್ತಿರುವಂತೆ ತೋರಿಸು. ಕೂಡಲೇ ಶಬ್ದ ಕೇಳಿದತ್ತ ಓಡಿದ ಆತನ ಕಣ್ಣಿಗೆ ಬಿದ್ದದ್ದು ಓರ್ವ ಬಾಲಕ ಕೆಸರಿನ ಮಡುವಿನಲ್ಲಿ ಹೂತು ಹೋಗುತ್ತಿರುವುದನ್ನು. ಏನಾದರೂ ಮಾಡಿ ಆ ಬಾಲಕನನ್ನು ರಕ್ಷಿಸಲೇಬೇಕೆಂದು ಅತ್ತಿತ್ತ ನೋಡಿದ ರೈತ ಫ್ಲೆಮಿಂಗ್ ಅಲ್ಲಿಯೇ ಇದ್ದ ಮರದ ಒಣಗಿದ ಗಟ್ಟಿಯಾದ ಕೊಲ್ಲಿಯೊಂದನ್ನು ಎಳೆದು ತಂದು ಆ ಬಾಲಕನ ಕೈಗೆ ಸಿಗುವಂತೆ ಚಾಚಿದ. ಮುಳುಗುವವನಿಗೆ ಹುಲ್ಲು ಕಡ್ಡಿ ಆಸರೆಯಂತೆ ದೊಡ್ಡದೊಂದು ಮರದ ಕೊಲ್ಲಿಯೇ ದೊರೆತು ಅದನ್ನು ಆ ಬಾಲಕ ಗಟ್ಟಿಯಾಗಿ ಹಿಡಿದುಕೊಂಡಾಗ ಆತನನ್ನು ಹುರಿದುಂಬಿಸುತ್ತ ಫ್ಲೆಮಿಂಗ್ ಕೊಲ್ಲಿಯನ್ನು ತನ್ನತ್ತ ಎಳೆಯ ಲಾರಂಭಿಸಿದ. ಬಹಳಷ್ಟು ಪ್ರಯತ್ನದ ನಂತರ ತನ್ನ ಜೀವದ ಹಂಗು ತೊರೆದು ಆ ಬಾಲಕನನ್ನು ಉಳಿಸುವಲ್ಲಿ ಫ್ಲೆಮಿಂಗ್ ಯಶಸ್ವಿಯಾದನು. ಕೆಸರಿನಿಂದ ಹೊರಬಂದ ಬಾಲಕನ ಬಟ್ಟೆಗಳೆಲ್ಲವೂ ಕೆಸರಾಗಿದ್ದು ಹತ್ತಿರದಲ್ಲಿ ಇದ್ದ ತನ್ನ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful HAMPI TIMES E-paper

ಮನೆಗೆ ಆ ಬಾಲಕನನ್ನು ಕರೆದೊಯ್ದ ರೈತ ಫ್ಲೆಮಿಂಗ್ ಆತನಿಗೆ ಬಿಸಿ ನೀರನ್ನು ಒದಗಿಸಿ ಸ್ನಾನ ಮಾಡಲು ಹೇಳಿದ.

ಸ್ನಾನ ಮಾಡಿ ಬಂದ ಆ ಬಾಲಕನಿಗೆ ತನ್ನ ಮಗನ ಇದ್ದುದರಲ್ಲಿಯೇ ಒಳ್ಳೆಯ ಬಟ್ಟೆಗಳನ್ನು ನೀಡಿ ತೊಟ್ಟುಕೊಳ್ಳಲು ಹೇಳಿ ಊಟವನ್ನು ಮಾಡಿಸಿ ಬೀಳ್ಕೊಂಡನು.

ಮರುದಿನ ಮುಂಜಾನೆ ಫ್ಲೆಮಿಂಗ್ ಏಳುವ ಹೊತ್ತಿಗಾಗಲೇ ಆತನ ಮನೆಯ ಮುಂದೆ ಅತ್ಯಂತ ಬೆಲೆ ಬಾಳುವ ಕಾರಿನಲ್ಲಿ ವ್ಯಕ್ತಿಯೊಬ್ಬ ಆಗಮಿಸಿ ಫ್ಲೆಮಿಂಗ್ ನನ್ನು ಉದ್ದೇಶಿಸಿ ನೆನ್ನೆಯ ದಿನ ನೀನು ನನ್ನ ಮಗನನ್ನು ಉಳಿಸಿ ನನಗೆ ಮಹದುಪಕಾರವನ್ನು ಮಾಡಿರುವೆ. ನಿನಗೆ ನಾನು ಸದಾ ಋಣಿಯಾಗಿರುವೆ, ನಿನಗೇನು ಬೇಕು ಕೇಳು? ನಾನು ಕೊಡುತ್ತೇನೆ ಎಂದು ಒತ್ತಾಯಿಸಿದ. ಧನಿಕನ ಮಾತಿಗೆ ಕಿರುನಕ್ಕ ರೈತ ಫ್ಲೆಮಿಂಗ್ ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು ಎಂಬ ಮಾನವೀಯ ಪ್ರಜ್ಞೆಯಿಂದ ನಾನು ಬಾಲಕನನ್ನು ರಕ್ಷಿಸಿದ್ದೇನೆ ಹೊರತು ಇನ್ನಾವುದೇ ಆಸೆ, ಆಕಾಂಕ್ಷೆಗಳಿಂದ ಅಲ್ಲ. ನನಗೇನೂ ಬೇಡ ಎಂದು ಧನಿಕನಿಗೆ ಕೈಮುಗಿದು ಹೇಳಿದ.



ರೈತನ ಅಂತಃಕರಣದ ಮಾತುಗಳಿಗೆ ತಲೆದೂಗಿದ ಆ ಧನಿಕ ಅಲ್ಲಿಗೆ ಬಂದ ರೈತನ ಮಗನನ್ನು ಕಂಡು ಪ್ರೀತಿಯಿಂದ ಬಳಿ ಕರೆದು ಮಾತನಾಡಿಸಿದ. ಪುಟ್ಟ ಬಾಲಕನನ್ನು ತನ್ನೊಂದಿಗೆ ಕಳುಹಿಸಿ ಕೊಡುವಂತೆಯೂ ಆತನ ವಿದ್ಯಾಭ್ಯಾಸದ ಎಲ್ಲಾ ಖರ್ಚುಗಳನ್ನು ತಾನೇ ಹೊರುವುದಾಗಿಯೂ ಧನಿಕ ವ್ಯಕ್ತಿ ಕೇಳಿದನು.

ತನ್ನ ಅಸಹಾಯಕ ಪರಿಸ್ಥಿತಿಯಲ್ಲಿ ಮಗನಿಗೆ ಓದಿಸಲು ಸಾಧ್ಯವಿಲ್ಲದೆ ಇರುವ ಕಾರಣ ಧನಿಕನ ಮಾತಿಗೆ ಒಪ್ಪಿದ ರೈತ ಫ್ಲೆಮಿಂಗ್ ತನ್ನ ಮಗನನ್ನು ಅವರೊಂದಿಗೆ ಕಳುಹಿಸಲು ಒಪ್ಪಿಕೊಂಡ. ಹಾಗೆ ಫ್ಲೆಮಿಂಗನ ಮಗ ಅಲೆಕ್ಸಾಂಡರನನ್ನು ಕರೆತಂದ ಆ ಧನಿಕ ಆತನನ್ನು ನಗರದ ಅತ್ಯುನ್ನತ ಶಾಲೆಗೆ ಭರ್ತಿ ಮಾಡಿ ಆತನ ಎಲ್ಲಾ ಖರ್ಚು ವೆಚ್ಚಗಳನ್ನು ತಾನೇ ನೋಡಿಕೊಂಡನು. ಉನ್ನತ ವಿದ್ಯಾಭ್ಯಾಸದ ಮೂಲಕ ವೈದ್ಯಕೀಯ ಪದವಿಯನ್ನು ಗಳಿಸಿದ ಅಲೆಕ್ಸಾಂಡರ್ ತನ್ನ ಕ್ಷೇತ್ರದಲ್ಲಿ ಅತ್ಯುನ್ನತವಾದ ಸಾಧನೆಯನ್ನು ಮಾಡಿ ಸೋಂಕು ನಿರೋಧಕ ಮತ್ತು ಜೀವ ರಕ್ಷಕವಾದ ಪೆನ್ಸಿಲಿನ್ ಔಷಧಿಯನ್ನು ಕಂಡುಹಿಡಿದನು.

ಅದು ಎರಡನೇ ವಿಶ್ವಯುದ್ಧದ ಸಮಯ. ಒಂದು ದಿನ ಅಲೆಕ್ಸಾಂಡರ್ ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ನ್ಯೂಮೋನಿಯ ಕಾಯಿಲೆಯಿಂದ ಬಳಲುತ್ತಿದ್ದ, ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿದ್ದ ವ್ಯಕ್ತಿಯನ್ನು ಕರೆತರಲಾಯಿತು. ವೈದ್ಯ ಅಲೆಕ್ಸಾಂಡರ್ ಆಗ ತಾನೇ ತನ್ನ ಹೊಸ ಆವಿಷ್ಕಾರಕ್ಕೆ ಪರವಾನಿಗೆಯನ್ನು ಪಡೆದಿದ್ದು ಈ ರೋಗಿಗೆ ಪೆನ್ಸಿಲಿನ್ ಚುಚ್ಚುಮದ್ದನ್ನು ನೀಡುವ ಮೂಲಕ ಗುಣಪಡಿಸಿದ. ಆ ರೋಗಿ ಮತ್ತಾರು ಅಲ್ಲದೆ ಈ ಹಿಂದೆ ಅಲೆಕ್ಸಾಂಡರ್‌ನ ತಂದೆ ಫ್ಲೆಮಿಂಗ್ ಬದುಕಿಸಿದ ಪುಟ್ಟ ಬಾಲಕನೆ ಆಗಿದ್ದ. ಆ ಪುಟ್ಟ ಬಾಲಕನೇ ಮುಂದೆ ಅಮೆರಿಕದ ವಾರ್ ಟೈಮ್ ಪ್ರೈಮ್ ಮಿನಿಸ್ಟರ್ ವಿನ್ಸ್ ಟನ್ ಚರ್ಚಿಲ್ ಆಗಿದ್ದರು ಎಂಬ ಈ ಕಥೆ ನಿಜವೆ ಸುಳ್ಳೇ ಎಂಬುದು ಇಂದಿಗೂ ವಿವಾದಕ್ಕೆ ಆಸ್ಪದವಾಗಿದ್ದರೂ ಈ ಕಥೆಯ ಹಿಂದಿನ ತಾತ್ಪರ್ಯ ಮನ ಮುಟ್ಟುವಂತಹದ್ದು.

ಯಾವುದೇ ರೀತಿಯ ಪ್ರಲೋಭನೆರಹಿತವಾದ ಸಹಾಯವನ್ನು ನೀನು ಮಾಡಿದಾಗ ನಿನಗೂ ಕೂಡ ಅಂತಹದ್ದೇ ಸಹಾಯ ಖಂಡಿತವಾಗಿಯೂ ದೊರೆಯುತ್ತದೆ. ಒಳ್ಳೆಯತನ ಮತ್ತು ಒಳ್ಳೆಯ ಮೌಲ್ಯಗಳಿಗೆ ಈ ಜಗತ್ತು ಎಂದಿಗೂ ತಲೆಬಾಗುತ್ತದೆ. ಧನಾತ್ಮಕ ಚಿಂತನೆಗಳು ಒಳ್ಳೆಯ ಬದುಕನ್ನು ಹೊತ್ತು ತರುತ್ತವೆ ಎಂಬ ಸಂದೇಶವನ್ನು ಸಾರುವ ಈ ಕಥೆಯ ಸತ್ಯ ಮಿಥ್ಯಗಳ ಗೊಡವೆಯನ್ನು ಬಿಟ್ಟು ನೋಡಿದರೆ ಬದುಕಿಗೆ ಅತ್ಯವಶ್ಯಕವಾದ ಪಾಠವನ್ನು ನಾವು ಕಲಿಯಬಹುದು. ಏನಂತೀರಾ ಸ್ನೇಹಿತರೇ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

### ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿಗಮದ ಅಧ್ಯಕ್ಷೆ ಪಲ್ಲವಿ.ಜಿ ಸೂಚನೆ

# ನಿವೇಶನ ರಹಿತ ಅಲೆಮಾರಿಗಳಿಗೆ ನಿವೇಶನ, ಸೂರು ಸೌಲಭ್ಯ ಕಲ್ಪಿಸಿ



■ **ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ನಿವೇಶನ ರಹಿತರಿಗೆ ನಿವೇಶನ, ವಸತಿ ರಹಿತರಿಗೆ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಯಾದ ವಿವಿಧ ಯೋಜನೆಗಳ ಕುರಿತು ಪ್ರಗತಿ ಪರಿಶೀಲನೆ ಹಾಗೂ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಲೆಮಾರಿ ಸಮುದಾಯದವರು ಹೊಟ್ಟೆಪಾಡಿಗಾಗಿ ಅಲೆದಾಟ ನಡೆಸಿ ತಮ್ಮ ಜೀವನ ಸಾಗಿಸುತ್ತಾರೆ. ಮುಖ್ಯವಾಗಿ ಅವರಿಗೆ ನೆಲೆ ಇರುವುದಿಲ್ಲ. ಹಾಗಾಗಿ ಅವರಿಗೆ ಸೂರು ಕಲ್ಪಿಸುವುದು ಅಧಿಕಾರಿಗಳು ಆದ್ಯತೆಯಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯದ ನಿವೇಶನ ರಹಿತರಿಗೆ ನಿವೇಶನ ದೊರಕಿಸಿಕೊಡಲು ಜಾಗ ಇಲ್ಲದಿದ್ದಲ್ಲಿ ಜಿಲ್ಲಾಧಿಕಾರಿಯವರಿಂದ ಸೂಕ್ತ ಜಾಗ ಗುರುತಿಸಿ ನಿವೇಶನ ಹಂಚಿಕೆ ಮಾಡುವ ಕುರಿತು 2016 ರಲ್ಲಿ ಸರ್ಕಾರದ ಆದೇಶವಿದೆ ಎಂದು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿರುವ ವಿವಿಧ ಅಲೆಮಾರಿ ಸಮುದಾಯದವರ ಜಾತಿ ವಿವರಗಳನ್ನು ಸಮಾಜ ಕಲ್ಯಾಣ ಇಲಾಖೆ, ಆಯಾ ತಾಲ್ಲೂಕು ತಹಶೀಲ್ದಾರರು ಮತ್ತು ಇತರೆ ಇಲಾಖೆಗಳ ಜಂಟಿ ಸಹಯೋಗದಲ್ಲಿ ತಾಲ್ಲೂಕುವಾರು ಜಂಟಿ ಸರ್ವೇ ಕಾರ್ಯ ನಡೆಸಬೇಕು ಎಂದು ತಿಳಿಸಿದರು.

ಅಧಿಕಾರಿಗಳು ಮತ್ತು ನಾಮ ನಿರ್ದೇಶಿತ ಸದಸ್ಯರ ಮಧ್ಯ ಸಮನ್ವಯತೆ ಇರಬೇಕು. ಈ ಸಮುದಾಯಗಳಿಗೆ ಸರ್ಕಾರದ ಯೋಜನೆಗಳಡಿ ಸೌಲಭ್ಯಗಳು ದೊರಕಿಸಬೇಕು ಎಂಬ ಉದ್ದೇಶದೊಂದಿಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅನುಷ್ಠಾನ ಸಮಿತಿ ಇದ್ದು, ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಸಭೆ ನಡೆಸಿ ಯೋಜನೆಗಳ ಲಾಭ ದೊರಕಿಸಲು ಮತ್ತು ಅರ್ಹ ಫಲಾನುಭವಿಗಳ ಆಯ್ಕೆಗೆ ನೆರವಾಗುವಂತೆ ಅವರು ಸಲಹೆ ನೀಡಿದರು.

ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಗಳಡಿ ಇರುವ ಗುರಿಗಳನ್ನು ನಿಗದಿತ ಅವಧಿಯೊಳಗೆ ಅರ್ಹ ಫಲಾನುಭವಿಗಳಿಗೆ ತಲುಪಿಸಬೇಕು ಎಂದರು.

**ಜಾಗೃತಿ ಕಾರ್ಯಕ್ರಮ ಆಯೋಜಿಸಿ:**
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಲೆಮಾರಿ ಜನಾಂಗದ ಮಕ್ಕಳು ಮುಖ್ಯ ವಾಹಿನಿಗೆ ಬರಬೇಕು. ಶಿಕ್ಷಣದಿಂದವಂಚಿತರಾಗದಂತೆನೋಡಿಕೊಳ್ಳಬೇಕು. ಶಿಕ್ಷಣದಿಂದಲೇ ಅಭಿವೃದ್ಧಿ ಸಾಧ್ಯ. ಹಾಗಾಗಿ ಅವರಿರುವ ಜಾಗಗಳಲ್ಲಿ ಶಿಕ್ಷಣ ಕುರಿತು ಅರಿವು ಮೂಡಿಸುವ ಕೆಲವಾಗಬೇಕು ಎಂದು ಹೇಳಿದರು.

ಅಲೆಮಾರಿ ಸಮುದಾಯದವರಿಗೆ ಭೂಮಿ, ನೆಲೆ, ಸೂರು ಮುಖ್ಯವಾಗಿ ಶಿಕ್ಷಣದಿಂದ ವಂಚಿತರಾಗಿ ಮೌಢ್ಯತೆಯಿಂದ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಶಿಕ್ಷಣದ ಅರಿವು ಮೂಡಿಸುವುದರ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಅಧಿಕಾರಿಗಳು ಕಾಳಜಿ ವಹಿಸಬೇಕು. ಬಾಲ್ಯ ವಿವಾಹ ಪದ್ಧತಿಯಿಂದಾಗುವ ದುಷ್ಪರಿಣಾಮ ಕುರಿತು ತಿಳಿಸಬೇಕು. ಅಲೆಮಾರಿ ಸಮುದಾಯದ ವರಿಗಾಗಿಯೇ ಇರುವ ಸರ್ಕಾರಿ ಸೌಲಭ್ಯಗಳ ಕುರಿತು ತಿಳಿಸುವ ಕೆಲಸ ಮಾಡಬೇಕು ಎಂದರು.

**ಅಹವಾಲು ಸ್ವೀಕಾರ:**
ಬಳಿಕ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಸಂಘ ಸಂಸ್ಥೆಗಳ ಮತ್ತು ಅಲೆಮಾರಿ ಸಮುದಾಯದ ಸಾಮಾನ್ಯ ಜನರಿಂದ ಕುಂದುಕೊರತೆಗಳ ಬಗ್ಗೆ ಅಹವಾಲು ಸ್ವೀಕಾರ ಮಾಡಿದರು.

ಮೂಲ ಜನಾಂಗದವರಿಗೆ ವಸತಿ ರಹಿತರಿಗೆ ವಸತಿ ಸೌಲಭ್ಯ, ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ, ಸಮುದಾಯ ಭವನ, ಸ್ಮಶಾನಕ್ಕೆ ದಾರಿ ಕಲ್ಪಿಸುವ ಕುರಿತು, ಭೂಮಿ ಹಂಚಿಕೆ ಸೇರಿದಂತೆ ಹಲವಾರು ಸಮಸ್ಯೆಗಳ ಬಗ್ಗೆ ಅಹವಾಲು ಸಲ್ಲಿಕೆಯಾದವು. ಇದೇ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಬಿ.ಎಸ್.ಆನಂದ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸೇರಿದಂತೆ ಜಿಲ್ಲಾ ಅನುಷ್ಠಾನ ಸಮಿತಿಯ ಸದಸ್ಯರು, ವಿವಿಧ ಅಲೆಮಾರಿ ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಹುಸೇನ್‌ಗೆ ಶ್ರೀಜಗದ್ಗುರುಗಳಿಂದ ಸನ್ಮಾನ

### ಹುಸೇನ್ ಕಾರ್ಯಕ್ಕೆ ಜ.ಶ್ರೀಬಸವಲಿಂಗ ಮಹಾಸ್ವಾಮಿಗಳು ಹರ್ಷ



■ **ಹಂಪಿ ಟೈಮ್ಸ್ ಹೊಸಪೇಟೆ**
ಧಾರ್ಮಿಕ, ಅಧ್ಯಾತ್ಮಿಕ, ಸಾಮಾಜಿಕ ಸಮಾನತೆ, ಸಹಬಾಳ್ವೆಯ ಸ್ನೇಹ ಜೀವಿಯಾಗಿರುವ ಡಿ.ಹುಸೇನ್ ಅವರನ್ನು ಶ್ರೀಜಗದ್ಗುರು ಕೊಟ್ಟೂರು ಸಂಸ್ಥಾನ ಮಠದಿಂದ ಜಗದ್ಗುರು ಶ್ರೀ ಬಸವಲಿಂಗ ಮಹಾಸ್ವಾಮಿಗಳು ಸೋಮವಾರ ಜರುಗಿದ ಸರ್ವಧರ್ಮ ಸಮನ್ವಯ ರಥೋತ್ಸವದ ಧಾರ್ಮಿಕ ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಿ ಆಶೀರ್ವದಿಸಿದರು.

ಡಿ. ಹುಸೇನ್ ಮೂಲತಃ ಪುರಾತತ್ವ ಇಲಾಖೆಗೆ ಒಳಪಟ್ಟ ಸ್ಥಳಗಳಲ್ಲಿ ಉತ್ಖನನ, ದೇವಾಲಯಗಳ ಜೀರ್ಣೋದ್ದಾರ, ನವೀಕರಣ, ಭಗ್ನಾವಶೇಷಗಳ ಪುನರ್ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡ ಅನುಭವಿ. ಹಂಪಿ, ಬೇಲೂರು, ನಂಜನಗೂಡು, ಐಹೊಳೆ, ಪಟ್ಟದಕಲ್ಲು, ತುಮಕೂರಿನ ಸಿಬಿ ಮೊದಲಾದ ಹಿಂದೂ ಪಾರಂಪರಿಕ ದೇವಸ್ಥಾನಗಳ ಗೋಪುರ, ಗಾರೆಶಿಲ್ಪಗಳ ದುರಸ್ಥಿ ಹಾಗೂ ದೇವರುಗಳ ಮರು ಜೋಡಣೆ, ಜೀರ್ಣೋದ್ದಾರಗೊಳಿಸಿದ ಕೀರ್ತಿ ಹುಸೇನ್ ಇವರಿಗೆ ಸಲ್ಲುತ್ತದೆ. ಪುರಾತತ್ವ ಇಲಾಖೆಗೆ ಒಳಪಟ್ಟ ಪುರಾತನ ದೇವಸ್ಥಾನಗಳ ನವೀಕರಣ ಕಾರ್ಯಕ್ಕಾಗಿ ಅಧ್ಯಯನ, ಪಾರಂಪರಿಕ ಜ್ಞಾನ, ಗಾರೆ ಶಿಲ್ಪಗಳ ನಿರ್ಮಾಣದಲ್ಲಿ ಪ್ರಾವಿಣ್ಯತೆ, ವಾಸ್ತುಶಿಲ್ಪ ಹಾಗೂ ಸಾಂಪ್ರದಾಯಿಕ ವಾಸ್ತು ಶಾಸ್ತ್ರವನ್ನು ಅರಿತಿರುವ ಹುಷೇನ್ ಇವರು ವೇದ ಉಪನಿಷತ್ತು ಪಾರಂಪರಿಕ ಜ್ಞಾನದ ಹಿನ್ನೆಲೆಯಲ್ಲಿ ದೇವಸ್ಥಾನದ ವಾಸ್ತುಶಿಲ್ಪಗಳನ್ನು ಮೂಲ ಪರಂಪರೆಗೆ ಧಕ್ಕೆ ಆಗದ ಹಾಗೆ ನಿರ್ಮಿಸಿ ವೇದ ಅಧ್ಯಯನ ಪಂಡಿತರು ಸಹ ತಲೆದೂಗುವಂತೆ ಮಾಡಿದ ಕಾರ್ಯತಪ್ಪರತೆ ಹುಸೇನ್ ಇವರದ್ದು. ಇವರ ಕಾರ್ಯಕ್ಕೆ ನಾಡಿನ ಅನೇಕ ಮಠ ಮಂದಿರ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸನ್ಮಾನಿಸಿವೆ. ಇತ್ತೀಚೆಗೆ ಕರ್ನಾಟಕ ಸರ್ಕಾರದ ಜಕಣಾಚಾರಿ ಪ್ರಶಸ್ತಿ ಗೌರವಕ್ಕೂ ಪಾತ್ರರಾಗಿದ್ದಾರೆ.

1984 ರಿಂದ ಹಂಪಿಯ ಉತ್ಖನನ, ಜೀರ್ಣೋದ್ಧಾರ ಕಾರ್ಯದಲ್ಲಿ ಅನೇಕ ದೇವಸ್ಥಾನಗಳ ಪುನರ್ ನಿರ್ಮಾಣ ಕಾರ್ಯದಲ್ಲಿ ಪಾಲ್ಗೊಂಡಿದ್ದವರು.ವಿಶೇಷವಾಗಿ ಪ್ರಸಿದ್ಧ ಕಲಾವಿದರಾದ ಎಸ್ ಎಂ ಜಾನ್ ಅವರ ಜೊತೆಗೂಡಿ ಭಗ್ನಗೊಂಡ ಬೃಹತ್ ಮೂರ್ತಿಯಾದ ಹಂಪಿಯ ಉಗ್ರ ನರಸಿಂಹನನ್ನು ಪುನರ್ ಜೋಡಿಸಿ ಲಕ್ಷ್ಮೀನರಸಿಂಹನಂತೆ ಕಾಣುವಂತೆ ಮಾಡಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಹೀಗೆ ಹಂಪಿಯ ಉತ್ಖನನ, ಪುನರ್ಜೋಡಣೆಯಲ್ಲಿ ಪಾಲ್ಗೊಂಡು ಹಂಪಿಯ ಪ್ರತಿ ಸ್ಮಾರಕ, ಮಂಟಪ, ಕಲ್ಲುಬಂಡೆಗಳ ಬಗ್ಗೆ ಇಂಚಿಂಚು ಮಾಹಿತಿಯನ್ನು ಹೊಂದಿರುವ ಇವರನ್ನು ಓಡಾಡುವ ಹಂಪಿಯ ವಿಶ್ವಕೋಶವೆಂದೆ ಕರೆಯುತ್ತಿದ್ದಾರೆ. ಹಂಪಿಯ ಬಗ್ಗೆ ಮಾಹಿತಿಗಾಗಿ ಈ ನಾಡಿನ ವಿದ್ವಾಂಸರು ಚರಿತ್ರಕಾರರು ಪುರಾತತ್ವದ ತಜ್ಞರು ಇವರೊಂದಿಗೆ ಸದಾ ಸಂಪರ್ಕದಲ್ಲಿರುತ್ತಾರೆ. ಹಂಪಿಯ ಭಾಗವೇ ಆಗಿದ್ದಾರೆ ಹುಸೇನ್ ಹಂಪಿಯಿಂದ ದೆಹಲಿಯವರೆಗೆ ಇವರ ನಿರ್ಮಿಸಿದ ಹಂಪಿಯ ಸ್ಮಾರಕಗಳ ಟ್ಯಾಬ್ಲೋಗಳು ಪ್ರದರ್ಶನಗೊಂಡಿವೆ. ಹಿಂದೂ ಮುಸ್ಲಿಂ ಹಬ್ಬಗಳನ್ನು ಆಚರಿಸಿಕೊಂಡು ಬಂದಿರುವ ಇವರ ಕುಟುಂಬ ಸಮಾಜದಲ್ಲಿ ಆದರ್ಶ ಕುಟುಂಬವಾಗಿದೆ. ನಾಡಿನ ಹಲವಾರು ಮಠಗಳಿಗೆ ಯತಿಗಳಿಗೆ ಬೇಕಾಗಿರುವ ಹುಸೇನ್ ಅವರು ಒಂದು ರೀತಿ ಸಂತನಂತೆ ಬದುಕುತ್ತಿದ್ದಾರೆ. ಸದ್ಯ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದಾರೆ.

**Consistent effort, smart revision, and self-confidence will help you achieve 625/625 in SSLC. Stay positive and believe in yourself!**

## ಕವಿ ಮನಸು

### ಹೋಳಿ



ಹೋಳಿಯ ಬಣ್ಣಗಳು
ಹಳದಿ ಸಂಭ್ರಮದ ಬಣ್ಣಗಳು
ಹಸಿರು ಸಮೃದ್ಧಿಯ ಬಣ್ಣಗಳು
ಕೇಸರಿ ನೇರಳೆ ಕೆಂಪು ನೀಲಿ ಬಣ್ಣಗಳು
ಈ ರಂಗು ರಂಗಿನ ಬಣ್ಣಗಳು
ರಂಗು ರಂಗಿನ ರಂಗೋಲಿಯಂತೆ
ರಂಗು ರಂಗಿನ ಕಾಮನಬಿಲ್ಲಿನಂತೆ
ಈ ಎಲ್ಲಾ ಬಣ್ಣ ಬಣ್ಣಗಳ ಹಬ್ಬ ಹೋಳಿ
ಬಣ್ಣ ತುಂಬುವ ಹಬ್ಬ ಹೋಳಿ
ಬಕೇಟ್ ನೀರಲಿ ಬಣ್ಣವು ತುಂಬಿಸಿ
ಬಣ್ಣದ ಹೋಳಿಯ ರಂಗು ಎರಚಿ
ರಂಗು ರಂಗಿನ ಬಣ್ಣಗಳಲ್ಲಿ
ನಮ್ಮ ಜೀವನ ರಂಗಾಗಿರಲಿ
ಈ ಬಣ್ಣದ ಹೋಳಿಯ ಹಬ್ಬ
ಹೊಸ ಚೈತನ್ಯ ತುಂಬಿ ಬರಲ್ಲಿ
ಬಣ್ಣ ಬಣ್ಣದ ಕನಸುಗಳು ಹೊತ್ತು ತರಲಿ.

– ವಿ.ಎಂ.ಎಸ್.ಗೋಪಿ
ಬೆಂಗಳೂರು.

### ಬಣ್ಣ

ಮಕ್ಕಳಿಗೆ ಪ್ರಿಯ ಬಣ್ಣ
ಮೂಕ ಪ್ರಾಣಿಗಳ ಮೇಲೆ
ಎರಚದಿರಿ ಬಣ್ಣ
ಅವರ ಜೀವಕ್ಕೆ ಆಪತ್ತಿದೆಯಣ್ಣ
ನಮ್ಮ ಖುಷಿಗಾಗಿ ಮುಗ್ಧ ಜೀವದ ಬಲಿ
ಬೇಡ
ಸುರಕ್ಷತೆಯು ಬಹಳ ಮುಖ್ಯವಣ್ಣ
ಬಿಳಿಯ ಬಣ್ಣ ಸಾರಿದಂತೆ
ಶಾಂತಿಯಿಂದ ವರ್ತಿಸೋಣ
ಬಣ್ಣಗಳಂತೆ ನಾವು ಕಂಡ
ಕನಸು ನನಸಾಗಿ
ನಮ್ಮ ಜೀವನ ರಂಗೇರಿಸಿ ಕೊಳ್ಳೋಣ.

– ಸುವರ್ಣಾ ಭಟ್ಟ

# ಹೋಳಿ ಹಬ್ಬ ಮದ್ಯ ಮಾರಾಟಕ್ಕೆ ನಿಷೇಧ

■ **ಹಂಪಿ ಟೈಮ್ಸ್ ಹೊಸಪೇಟೆ**
ಹೋಳಿ ಹಬ್ಬದ ನಿಮಿತ್ತ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ, ಸಾಗಾಣಿಕೆ ಹಾಗೂ ಮದ್ಯ ಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿ ಎಂ.ಎಸ್.ದಿವಾಕರ್ ಆದೇಶಿಸಿದ್ದಾರೆ.

ಜಿಲ್ಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ಮತ್ತು ಈ ಹಬ್ಬದ ದಿನಗಳಲ್ಲಿ ರಾತ್ರಿ ವೇಳೆಯಲ್ಲಿ ಹೆಚ್ಚಿನ ಜನ ಸೇರುವ ಸಾಧ್ಯತೆಗಳು ಇರುವುದರಿಂದ ಸಾರ್ವಜನಿಕರು ಮದ್ಯ ಸೇವನೆ ಮಾಡುವುದು, ಕುಡಿದು ಅಮಲಿನಲ್ಲಿ ವಾಹನ ಚಾಲನೆ ಮಾಡುವುದರಿಂದ ಗಲಾಟೆಗಳು ಮತ್ತು ಅಪಘಾತಗಳು ಆಗುವ ಸಾಧ್ಯತೆಗಳು ಇರುವ ಕಾರಣ. ಹೊಸಪೇಟೆ ಉಪವಿಭಾಗದ ಹೊಸಪೇಟೆ ಪಟ್ಟಣ, ಗ್ರಾಮೀಣ, ಚಿತ್ತವಾಡ್ಗಿ, ಕಮಲಾಪುರ, ಹಂಪಿ, ಟಿ.ಬಿ.ಡ್ಯಾಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 13 ರ ಬೆ.6 ಗಂಟೆಯಿಂದ ಮಾ.14 ರ ಸಂಜೆ 6 ಗಂಟೆಯವರೆಗೆ, ಕೂಡ್ಲಿಗಿ ಉಪವಿಭಾಗದ ಕೂಡ್ಲಿಗಿ ವೃತ್ತ ಕಚೇರಿ ವ್ಯಾಪ್ತಿಯ ಕೂಡ್ಲಿಗಿ, ಗುಡೇಕೋಟೆ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 13 ರ ಸಂಜೆ 6 ಗಂಟೆಯಿಂದ ಮಾ.15 ರ ಸಂಜೆ 6 ಗಂಟೆಯವರೆಗೆ, ಕೊಟ್ಟೂರು ವೃತ್ತ ಕಚೇರಿ ವ್ಯಾಪ್ತಿಯ ಕೊಟ್ಟೂರು, ಹೊಸಹಳ್ಳಿ ಠಾಣೆ ಮಾರ್ಚ್ 14 ರ ಸಂಜೆ 6 ಗಂಟೆಯಿಂದ ಮಾ.15 ರ ರಾತ್ರಿ 10 ಗಂಟೆಯವರೆಗೆ, ಹ.ಬೊಹಳ್ಳಿ ವೃತ್ತ ಕಚೇರಿಯ ವ್ಯಾಪ್ತಿಯ ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ, ತಂಬ್ರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಮಾರ್ಚ್ 13 ರ ಬೆಳಿಗ್ಗೆ 6 ಗಂಟೆಯಿಂದ ಮಾ.15 ರ ಸಂಜೆ 6 ಗಂಟೆಯವರೆಗೆ, ಹರಪನಹಳ್ಳಿ ಉಪ ವಿಭಾಗ ಹಡಗಲಿ, ಹಿರೇಹಡಗಲಿ, ಇಟ್ಟಿಗಿ, ಹರಪನಹಳ್ಳಿ, ಹಲವಾಗಲು, ಚಿಗಟೇರಿ, ಅರಸೀಕೆರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾರ್ಚ್ 14 ರ ಬೆಳಿಗ್ಗೆ 6 ಗಂಟೆಯಿಂದ ಮಾ.15 ರ ರಾತ್ರಿ 8 ಗಂಟೆಯವರೆಗೆವ್ಯಾಪ್ತಿಯಲ್ಲಿಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ನಿಷೇಧಾಜ್ಞೆ ಮಾಡಿದ್ದು ಮಾರಾಟ ಹಾಗೂ ಸಾಗಾಣಿಕೆ ಮಾಡುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**
2025–26 ನೇ ಸಾಲಿನ ಪರಿಶಿಷ್ಟ ಜಾತಿಯ ಹಾಗೂ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಮಕ್ಕಳಿಗೆ ಇಲಾಖಾ ವತಿಯಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ನೀಡಿ ಶ್ರೀರಾಮಕೃಷ್ಣ ವಿದ್ಯಾಶಾಲಾ ಯಾದವಗಿರಿ, ಮೈಸೂರು ಇಲ್ಲಿ 8 ನೇ ತರಗತಿಗೆ ಹಾಗೂ ವಿಜಯಪುರ ಜಿಲ್ಲೆಯ ಮಾನಸ ಗಂಗೋತ್ರಿ ಶಾಲೆಯಲ್ಲಿ 6 ನೇ ತರಗತಿ ಪ್ರವೇಶ ಕಲ್ಪಿಸಲು ಅರ್ಜಿ ಅಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಮಾ.12 ರಿಂದ ವಿಜಯನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾ, ತಾಲೂಕು ಕಚೇರಿಗಳಿಗೆ ಭೇಟಿ ನೀಡಿ ಅರ್ಜಿಯನ್ನು ಪಡೆದು, ಮಾ.25 ರೊಳಗಾಗಿ ಭರ್ತಿ ಮಾಡಿ ದಾಖಲೆಗಳೊಂದಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಜಂಟಿ ನಿರ್ದೇಶಕ ಹೆಚ್.ವಿ.ಮಂಜುನಾಥ ತಿಳಿಸಿದ್ದಾರೆ.



**ಹೊಸಪೇಟೆಯಲ್ಲಿ ಶ್ರೀ ರೇಣುಕಾಚಾರ್ಯರ ಜಯಂತ್ಯೋತ್ಸವವನ್ನು ಭಕ್ತಿಯಿಂದ ಆಚರಿಸಲಾಯಿತು. ಶ್ರೀ ಸಿದ್ಧಲಿಂಗ ಶ್ರೀಗಳು, ಅರ್ಚಕರ ಸಂಘದ ಪದಾಧಿಕಾರಿಗಳು, ಭಕ್ತರು ಪಾಲ್ಗೊಂಡು ಬುಧವಾರ ಭಕ್ತಿ ನಮನ ಸಲ್ಲಿಸಿದರು.**

# ಜೋಡಿ ರಥೋತ್ಸವ ಅದ್ದೂರಿ



■ **ಹಂಪಿ ಟೈಮ್ಸ್ ಕೊಟ್ಟೂರು**
ಪಟ್ಟಣದ ಕೋಟೆ ಪ್ರದೇಶದ ಪೂರ್ವ ವೀರಭದ್ರೇಶ್ವರ ಸ್ವಾಮಿಯ ಅಗ್ನಿಕುಂಡ ಹಾಯುವ ಹಾಗೂ ಗುಗ್ಗಳ ಮೆರವಣಿಗೆಯು ಭಕ್ತರ ಸಮುಹದಲ್ಲಿ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು. ಬುಧವಾರ ವೀರಭದ್ರೇಶ್ವರ ಸ್ವಾಮಿ ಹಾಗೂ ರೇಣುಕಾಚಾರ್ಯರ ಜೋಡಿ ರಥೋತ್ಸವ ಭಕ್ತರು ಸಂಭ್ರಮದಿಂದ ಎಳೆದು ಭಕ್ತಿ ಸೇವೆ ಸಲ್ಲಿಸಿದರು.

ಮಂಗಳವಾರ ಗಂಗೆಪೂಜೆಯೊಂದಿಗೆ ಧಾರ್ಮಿಕ ಆಚರಣೆಗೆ ಚಾಲನೆ ಪಡೆದುಕೊಂಡು ದೇವಸ್ಥಾನ ಬಳಿ ಮೆರವಣಿಗೆ ಮೂಲಕ ಆಗಮಿಸುತ್ತಿದ್ದಂತೆ ಹರಕೆ ಕೊತ್ತ ಭಕ್ತರು ದೇವಸ್ಥಾನದ ಮುಂಭಾಗದ ಅಗ್ನಿ ಕುಂಡ ಹಾದು ಭಕ್ತಿ ಸಮರ್ಪಿಸಿದರು. ಅಗ್ನಿಕುಂಡ ಹಾಯುವ ಧಾರ್ಮಿಕ ಕಾರ್ಯಕ್ರಮದ ನಂತರ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಮೆರವಣಿಗೆಯು ನಡೆಯಿತು. ಈ ವೇಳೆ ಪುರಂತರ ಕುಣಿತ ಸ್ವಾಮಿಯ ಖಡ್ಗ, ಒಡಪುಗಳು ಆಕರ್ಷಣೆಯಾಗಿದ್ದವು.

ಮೆರವಣಿಗೆಯುದ್ದಕ್ಕೂ ವೀರಭದ್ರೇಶ್ವರ ಸ್ವಾಮಿಯ ಭಕ್ತರು ಕೆನ್ನೆಗೆ, ಕೈಗೆ ಶಸ್ತ್ರ ಹಾಕಿಸಿಕೊಂಡರು.ಶಸ್ತ್ರ ಹಾಕಿಸಿಕೊಂಡ ಯುವಕರ ಗುಂಪು ದಾರವನ್ನು ಕೆನ್ನೆಯೊಳಗೆ ಸೇರಿಸಿಕೊಂಡು ಒಬ್ಬರಿಂದೊಬ್ಬರಿಗೆ ಸಾಗಿಸಿಕೊಂಡು ಕುಣಿದು ಸಂಭ್ರಮಿಸಿದರು. ಮೆರವಣಿಗೆಯಲ್ಲಿ ದೇವಸ್ಥಾನದ ಅರ್ಚಕರು, ದೈವಸ್ತರು, ಮುಖಂಡರು ಹಾಗೂ ಮಹಿಳೆಯರು ಭಕ್ತರು ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE READERS

Classified Advertisements
Examples: Job postings, Real estate listings, Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com

# ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಅಚ್ಚುಕಟ್ಟಾಗಿ ನಡೆಸಿ

## ಕೊಪ್ಪಳ ಡಿಸಿ ನಲಿನ್ ಅತುಲ್ ಹೇಳಿಕೆ | ಮಾರ್ಚ್21 ರಿಂದ ಏ.4 ರವರೆಗೆ | ಸಿಸಿ ಕ್ಯಾಮರ್ ಆಫ್ ಆಗದಂತೆ ಬ್ಯಾಟರಿ ವ್ಯವಸ್ಥೆ

## ಸಿಸಿ ಕ್ಯಾಮರದ ಬಗ್ಗೆ ಮಕ್ಕಳು ಶಿಕ್ಷಕರಿಂದಲೇ ಭಯಗೊಳ್ಳುವುದು ಬೇಡ | ಸರಸ್ವತಿ ಪೂಜೆಗೆ ಸಿದ್ದರಾದಂತೆ ಪರೀಕ್ಷೆಗೂ ಸಿದ್ಧರಾಗಿ

**ಹಂಪಿ ಟೈಮ್ಸ್ ಕೊಪ್ಪಳ**

ಪರೀಕ್ಷಾ ಮಾರ್ಗಸೂಚಿಗಳನ್ವಯ ಕೊಪ್ಪಳ ಜಿಲ್ಲೆಯಲ್ಲಿ 2025ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ನಡೆಸುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮಾರ್ಚ್/ಏಪ್ರಿಲ್–2025ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳ ಕುರಿತು ಶಾಲಾ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಇದೇ ಮಾರ್ಚ್ 21 ರಿಂದ ಏಪ್ರಿಲ್ 4 ರವರೆಗೆ ನಡೆಯಲಿರುವ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳನ್ನು ಯಾವುದೇ ಅಕ್ರಮ ಚಟುವಟಿಕೆಗೆ ಅವಕಾಶ ಕೊಡದೇ ಪರೀಕ್ಷಾ ನಿಯಮಗಳಂತೆ ನಡೆಸಬೇಕು. ಪರೀಕ್ಷೆ ಮುಖ್ಯ ಅಧೀಕ್ಷಕರು ಮಾರ್ಗಸೂಚಿಗಳನ್ನು ಓದಿಕೊಂಡು ಅದರಂತೆ ಕಾರ್ಯನಿರ್ವಹಿಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಕ್ತ ಆಸನದ ವ್ಯವಸ್ಥೆ, ಅಗತ್ಯ ಕುಡಿಯುವ ನೀರು ಮತ್ತು ಶೌಚಾಲಯಗಳ ವ್ಯವಸ್ಥೆಯನ್ನು ಸಹ ಕಲ್ಪಿಸಬೇಕು. ಪರೀಕ್ಷೆ ಬರೆಯುವ ವಿಕಲಚೇತನ ವಿದ್ಯಾರ್ಥಿಗಳಿಗೆ ನೆಲ ಮಹಡಿಯಲ್ಲಿ ಸೂಕ್ತ ಆಸನದ ವ್ಯವಸ್ಥೆ ಮಾಡಬೇಕು. ಅಂಥ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಮತ್ತು ಬರವಣಿಗೆ ಸಹಾಯಕರ ಒಪ್ಪಿಗೆ ಪತ್ರವನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸಬೇಕು. ಪರೀಕ್ಷಾ ಕೇಂದ್ರದೊಳಗೆ ಯಾವುದೇ ಬಗೆಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಮತ್ತು ಪರೀಕ್ಷಾ ಅವಧಿಯಲ್ಲಿ ಕೊಠಡಿ ಮೇಲ್ವಿಚಾರಕರು ಮೊಬೈಲ್ ಬಳಕೆ ಮಾಡುವುದನ್ನು ಸಹ ನಿಷೇಧಿಸಲಾಗಿದೆ ಎಂದರು.

ಖಜಾನೆ ಇಲಾಖೆಯಲ್ಲಿ ಠೇವಣಿಯಲ್ಲಿರಿಸಲಾದ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ದಿನದಂದು ನಿಗದಿತ ಅವಧಿಯೊಳಗೆ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಹೊಣೆ ಆಯಾ ಮಾರ್ಗಾಧಿಕಾರಿಗಳಿಗೆ ವಹಿಸಲಾಗಿದ್ದು, ವಿಳಂಬಕ್ಕೆ ಅವಕಾಶವಿಲ್ಲದಂತೆ ಪ್ರಶ್ನೆಪತ್ರಿಕೆಯನ್ನು ನಿಗದಿತ ಅವಧಿಯೊಳಗೆ ತಲುಪಿಸಬೇಕು. ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತೆರಳಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಗತ್ಯ ಬಸ್ ವ್ಯವಸ್ಥೆಯನ್ನು ಕಲ್ಪಿಸಬೇಕು. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಬೇಕು. ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಸೂಚನೆ ಗಳನ್ನು ಎಲ್ಲ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಹಾಗೂ ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಶಿಕ್ಷಕರು, ಅಧಿಕಾರಿ, ಸಿಬ್ಬಂದಿಗಳನ್ನು ಹೊರತುಪಡಿಸಿ, ಇನ್ನುಳಿದವರ ಪ್ರವೇಶಕ್ಕೆ ಅವಕಾಶ ನೀಡಬಾರದು. ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತಲು ನಿಷೇಧಾಜ್ಞೆ ಜಾರಿಗೊಳಿಸಲಾಗುವುದು. ಶಿಕ್ಷಕರು, ಪರೀಕ್ಷಾ ನಿಯೋಜಿತ ಸಿಬ್ಬಂದಿಗಳು ಜವಾಬ್ದಾರಿ ಹಾಗೂ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮಾತನಾಡಿ, ಪರೀಕ್ಷೆ ಸಂದರ್ಭದಲ್ಲಿ ಸಿಸಿ ಕ್ಯಾಮರಾ ಆಫ್ ಆಗದಂತೆ ಕ್ರಮ ವಹಿಸಬೇಕು. ಯಾವುದೇ ತಾಂತ್ರಿಕ ಸಮಸ್ಯೆಯಾದಲ್ಲಿ ಕೂಡಲೇ ಸರಿಪಡಿಸಬೇಕು. ಕ್ಯಾಮರಾ ಒಂದು ನಿಮಿಷಕ್ಕಿಂತ ಹೆಚ್ಚು ಬಂದ್ ಆಗಬಾರದು. ಪರೀಕ್ಷಾ ಕೇಂದ್ರಗಳಲ್ಲಿ ಯುಪಿಎಸ್ ಬ್ಯಾಟರಿ ವ್ಯವಸ್ಥೆ ಇರಬೇಕು. ಪ್ರಸ್ತುತ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಪರೀಕ್ಷೆ ಬರೆಯುವ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ಕುಡಿ ಯುವ ನೀರಿನ ಪೂರೈಕೆಯಲ್ಲಿ ತೊಂದರೆ ಇದ್ದಲ್ಲಿ ಆಯಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು, ಸಂಬಂಧಿಸಿದ ನಗರಸಭೆ ಅಥವಾ ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಮುಂಚಿತವಾಗಿ ಸಂಪರ್ಕಿಸಿ ಕ್ರಮ ಕೈಗೊಳ್ಳಬೇಕು ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಶ್ರೀಶೈಲ ಬಿರಾದಾರ ಅವರು ಮಾತನಾಡಿ, ಈ ಬಾರಿಯ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗೆ ಜಿಲ್ಲೆಯ ಒಟ್ಟು 25,578 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲೆಯ ಗಂಗಾವತಿ ತಾಲ್ಲೂಕಿನ 23, ಕೊಪ್ಪಳ ತಾಲ್ಲೂಕಿನ 21, ಕುಷ್ಟಗಿ ತಾಲ್ಲೂಕಿನ 15 ಹಾಗೂ ಯಲಬುರ್ಗಾ ತಾಲ್ಲೂಕಿನ 14 ಸೇರಿದಂತೆ ಒಟ್ಟು 73 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬ ಮುಖ್ಯ ಅಧೀಕ್ಷಕರು ಹಾಗೂ ಪ್ರಶ್ನೆಪತ್ರಿಕೆ ಅಭಿರಕ್ಷಕರನ್ನು ನೇಮಿಸಲಾಗಿದೆ ಹಾಗೂ ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ವಿಭಾಗಗಳ ಪ್ರಶ್ನೆ ಪತ್ರಿಕೆ ಪಾಲಕರಾಗಿರುತ್ತಾರೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ವಿವಿಧ ತಾಲ್ಲೂಕುಗಳ ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯ ತಾಲ್ಲೂಕು ನೋಡಲ್ ಅಧಿಕಾರಿಗಳು, ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

> ವೆಬ್‌ಕ್ಯಾಸ್ಟಿಂಗ್ ಮಾದರಿಯಲ್ಲಿ ನಡೆಯುವ ಪರೀಕ್ಷೆಯ ಕುರಿತು ಕಳೆದ ಬಾರಿ ಸಿಸಿ ಕ್ಯಾಮರಾದ ಬಗ್ಗೆ ಮಕ್ಕಳಿಗೆ ಶಿಕ್ಷಕರೇ ಭಯ ಹುಟ್ಟಿಸಿದ್ದರು ಎಂದು ಹೇಳಲಾಗುತ್ತಿದೆ. ಈ ಬಾರಿ ಮಕ್ಕಳಿಗೆ ಯಾವುದೇ ರೀತಿಯ ಭಯ ಹುಟ್ಟಿಸದೇ, ಪರೀಕ್ಷೆಯನ್ನು ಅರಾಮಾಗಿ, ಚೆನ್ನಾಗಿ ಬರೆಯಿರಿ ಎಂದು ಅತ್ಮಸ್ಥೈರ್ಯ ಹೆಚ್ಚಿಸಬೇಕು.
>
> – ರಾಹುಲ್ ರತ್ನಂ ಪಾಂಡೇಯ
> ಸಿಇಒ ಜಿಪಂ ಕೊಪ್ಪಳ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ | ಸಂವತ್ಸರ: ಕ್ರೋಧಿ

13–03–2025 – ಗುರುವಾರ

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವಫಾಲ್ಗುಣ |
| ಯೋಗ | : ಧೃತಿ |
| ಕರಣ | : ವಾಣಿಜ |
| ಸೂರ್ಯೋದಯ | : 06:38:51 |
| ಸೂರ್ಯಾಸ್ತ | : 18:34:05 |
| ರಾಹು ಕಾಲ | : 14:06–15:35 |
| ಯಮಘಂಡ ಕಾಲ | : 06:39–08:08 |
| ಗುಳಿಕ ಕಾಲ | : 09:38–11:07 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 12–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.69 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9985 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 23.786 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1584.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2042 ಕ್ಯುಸೆಕ್ |
| ಸಾಮರ್ಥ್ಯ | 6.846 ಟಿಎಂಸಿ |

# ಇಂದಿನಿಂದ ಮೂರು ದಿನಗಳ ಕಾಲ ಜಿಲ್ಲೆಗೆ ಉಪಲೋಕಾಯುಕ್ತರ ಭೇಟಿ

## ಸಾರ್ವಜನಿಕರಿಂದ ದೂರುಗಳ ಸ್ವೀಕಾರ, ಪ್ರಕರಣಗಳ ವಿಚಾರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ನ್ಯಾಯಮೂರ್ತಿ ಹಾಗೂ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ಮಾ.13 ರಿಂದ 15 ರವರೆಗೆ ವಿಜಯನಗರ ಜಿಲ್ಲೆಗೆ ಭೇಟಿ ನೀಡುತ್ತಿದ್ದಾರೆ ಎಂದು ಹೊಸಪೇಟೆ ಘಟಕದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

ಹೊಸಪೇಟೆ ನಗರದ ಡ್ಯಾಂ ರಸ್ತೆಯ ನೆಹರು ಕಾಲೋನಿಯಲ್ಲಿರುವ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನ ಎದುರಿಗೆ ಇರುವ ಸಹಕಾರಿ ಕಲ್ಯಾಣ ಮಂಟಪದಲ್ಲಿ ಮಾ.13 ರಂದು ಬೆ.10 ಗಂಟೆಯಿಂದ ಸಂಜೆ.5 ಗಂಟೆವರೆಗೆ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸುವರು. ಸಂಜೆ 5:30 ರಿಂದ 6:30 ರವರೆಗೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಬಗ್ಗೆ ಕಾನೂನು ಸಾಕ್ಷರತಾ ಕಾರ್ಯಕ್ರಮದಲ್ಲಿ ಭಾಗವಹಿ ಸುವರು. ಮಾ.14 ರಂದು ಬೆ.6:30 ರಿಂದ ರಾತ್ರಿ 8:30 ರವರೆಗೆ ಜಿಲ್ಲೆಯ ವಿವಿಧ ಸಾರ್ವಜನಿಕ ಸ್ಥಳಗಳ ಹಾಗೂ ಕಚೇರಿಗಳಿಗೆ ಭೇಟಿ ನೀಡುವರು. ಮಾ.15 ರಂದು ಬೆ.10 ಗಂಟೆಯಿಂದ ಮಧ್ಯಾಹ್ನ 1:15 ರವರೆಗೆ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರಲ್ಲಿ ದಾಖಲಾದ ದೂರುಗಳ ವಿಚಾರಣೆ ಮತ್ತು ಮಾ.13 ರಂದು ಸ್ವೀಕೃತಗೊಂಡ ದೂರುಗಳ ಪರಿಶೀಲನೆ ನಡೆಸುವರು. ಮಧ್ಯಾಹ್ನ 1:45 ರಿಂದ 2:30 ರವರೆಗೆ ವಿಜಯನಗರ ಜಿಲ್ಲಾ ವಕೀಲರ ಸಂಘದ ವಕೀಲರೊಂದಿಗೆ ಸಂವಹನ ಸಭೆ. ಮಧ್ಯಾಹ್ನ 2:30 ರಿಂದ ಸಂಜೆ 5 ಗಂಟೆಯವರೆಗೆ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರಲ್ಲಿ ದಾಖಲಾದ ದೂರುಗಳ ವಿಚಾರಣೆ ಮತ್ತು ಮಾ.13 ರಂದು ಸ್ವೀಕೃತಗೊಂಡ ದೂರುಗಳ ಪರಿಶೀಲನೆ ನಡೆಸಲಾಗುವುದು. ಸಂಜೆ 5:45 ರಿಂದ ಸಂಜೆ 7 ಗಂಟೆಯವರೆಗೆ ಜಿಲ್ಲೆಯ ವಿವಿಧ ಸಾರ್ವಜನಿಕ ಸ್ಥಳಗಳ ಹಾಗೂ ಕಚೇರಿಗಳಿಗೆ ಭೇಟಿ ನೀಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲ ಮಕ್ಕಳನ್ನು ಶಾಲೆಗೆ ಕಳಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿಕೆ | ಜನಜಾಗೃತಿ ಜಾಥಕ್ಕೆ ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಬಾಲ ಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಲು ಜನಸಾಮಾನ್ಯರಿಗೆ ಜಾಗೃತಿ ಅಗತ್ಯ ವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ಮಂಗಳವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಗಂಣದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆ ಇವರ ಸಹಯೋಗದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿಯಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಹಮ್ಮಿಕೊಂಡಿರುವ ಜನಜಾಗೃತಿ ಜಾಥಾಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಬಳಿಕ ಮಾತನಾಡಿದರು. ಬಾಲ ಕಾರ್ಮಿಕ ಪದ್ಧತಿಯನ್ನು ಅಳಿಸಿ, ಮಕ್ಕಳನ್ನು ಶಾಲೆಗೆ ಕಳುಹಿಸಿ, ಶಿಕ್ಷಣವಂತರನ್ನಾಗಿಸಲು ಎಲ್ಲಾ ಪಾಲಕರು ಕಾಳಜಿ ವಹಿಸಬೇಕು. ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ಹಚ್ಚುವುದು, ದುಡಿಸಿಕೊಳ್ಳುವುದು ಅಪರಾಧವಾಗಿದೆ. ಅಂತಹವರ ವಿರುದ್ಧ ಬಾಲ ಕಾರ್ಮಿಕ ಕಾಯ್ದೆಯಡಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು. 50 ಸಾವಿರದಿಂದ 20 ಸಾವಿರದವರೆಗೆ ದಂಡ, 2 ವರ್ಷದವರೆಗೆ ಜೈಲು ಶಿಕ್ಷೆ ಕಡ್ಡಾಯವಾಗಿರುತ್ತದೆ. ಉದ್ಯಮಿದಾರರು, ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮುನ್ನ ವಯೋಮಿತಿ ಪರಿಶೀಲಿಸಿ ಕೆಲಸ ನೀಡಬೇಕು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಯೋಜನಾ ನಿರ್ದೇಶಕ ಎ.ಮೌನೇಶ್ ಪ್ರಾಸ್ತಾವಿಕವಾಗಿ ಮಾತನಾಡಿ. ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಹಮ್ಮಿಕೊಂಡಿರುವ ಜನಜಾಗೃತಿ ಜಾಥಾ ಮಾ.11 ರಿಂದ ಮಾ.21 ರವರೆಗೆ ಜಿಲ್ಲೆಯಾದ್ಯಂತ ಆಟೋ ಮೂಲಕ ಪ್ರಚಾರ ಮಾಡುತ್ತಾ ಕರಪತ್ರ, ಭಿತ್ತಿ ಪತ್ರ ಹಂಚುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಈ ವೇಳೆ ಕಾರ್ಮಿಕ ಅಧಿಕಾರಿ ಸೂರಪ್ಪ, ಕಾರ್ಮಿಕ ನಿರೀಕ್ಷಕರಾದ ಶಿವಶಂಕರ್, ಗೋಪಾಲ್ ದೂಪದ್ ಇದ್ದರು.

**SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ**

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆಗೆ ಕೇವಲ ಬರಿ 8 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಇಂಗ್ಲಿಷ್

# Important Essays

## Social Evils

A social evil is anything that is actively harmful for a community or society, as in To have a peaceful community we must end social evils. In India there are so many social evils like Caste system, poverty, dowry system, gender inequality, illiteracy, drug abuse, prostitution, child labor, child abuse and child marriage etc. These social evils affects the progress of the nation.

To check all the issues, the first and the foremost step should be to educate people. Government too has taken constructive measures like making primary education free and compulsory for children from 6 – 14 years and child labor has been banned.

To eradicate the social evils citizens should strictly follow the rules as considered in the Constitution. As we are youth, we should strengthen the organizations having the agenda to eradicate these social problems in India by spreading awareness and by holding demonstrations.

## Ban on the Plastic

Today we see plastic everywhere. We use som many plastic things in our daily life. Plastic bags are most hazardous materials that we dump in oceans that is causing the aquatic life.

Plastics are getting polluted due to dumping of plastic waste, also our land and air are getting polluted. Harmful chemicals from the plastic are getting percolated into the land and reaching the water table. When we consume this water or any fish that has been from the polluted part of the ocean, then we are indirectly consuming the plastic that we threw away. Consumption of plastics can cause cancer, pneumonia and other forms of fatal diseases and abnormalities.

Banning plastics is not an option at all because plastics are used everywhere and it has made our lives better. But banning certain plastic industries like the plastic bag seems like a good idea because alternatives exist for plastics bags. The alternatives for a plastic bag is jute bag, gunny bag or paper bag. Reuse and recycle concept can be adopted for the usage of plastic bags.

## Environmental pollution

Today's environment is completely harmful for all animals including human beings. Environment pollution in its various forms, is a growing concern worldwide.

Air pollution, water pollution, soil pollution, sound pollution are other farms of environment pollution. Factory and vehicles emissions are harmful for environment. Burning fossil fuels leads to the release of carbon monoxide, sulfur dioxide and particulate matter. These cause for health implications for humans and damage the environment. These forms of pollution disrupt the delicate balance of our ecosystems, harm biodiversity, and contribute to climate change.

Addressing environment pollution is not just a responsibility but a necessity to safeguard our planet's future. We all join the hand to improve the environment by planting the trees and build good environmental activities in all villages and cities.

## Air pollution

Polluting air is called air pollution. The W.H.O defines air pollution as "the presence of materials in the air in such concentration which are harmful to man and his environment". Air pollution has become a big problem these days.

It has caused a lot of damage to the man kind, wild life and personal property. It has affected the lives of humans and animals, causing a lot of health disorders. It has been increasing so rapidly due to the increase in the number of industries and vehicles. Air pollution causes fog, smog and introduces a lot of harmful gases in the environment. It has greatly affected the humans with diseases like asthma, bronchitis and many lung diseases. The pollution emitted from one industry does not stay at one place and spreads rapidly and affects the atmosphere and the species very much.

Air pollution is constantly damaging the whole biological system. Another direct effect is the immediate alternations that the world is witnessing due to global warming. We need to take care of this before it gets worse.

www.hampitimes.com - Hampi Times Margadarshi

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ